
# ಶ್ರೀಮಾತೆಯವರ ದೇಹದ ಯೋಗ

## (1956–1973)



ಅಖಿಲ ಭಾರತ ಪತ್ರಿಕೆ

ಏಪ್ರಿಲ್ – 2014



*A secret harmony steals through the*
*blind heart*
*And all grows beautiful because Thou art.*

- Sri Aurobindo

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**


## ಪರಿವಿಡಿ

## "ಶ್ರೀಮಾತೆಯವರ ದೇಹದ ಯೋಗ" (1956–1973)

**ಭೌತದ್ರವ್ಯ ದಿವ್ಯಾತ್ಮನ ಮುಖವನ್ನು ತೆರೆದು ತೋರಿಸುವುದು.**

– ಶ್ರೀ ಅರವಿಂದರು

### ಪೀಠಿಕಾರೂಪದ ಟಿಪ್ಪಣಿ

1956 ರಿಂದ 1973ರ ವರೆಗಿನ ವರ್ಷಗಳ ಕಾಲದಲ್ಲಿ ಶ್ರೀಮಾತೆಯವರು ತಮ್ಮ ಶಿಷ್ಯ ಸತ್ಪ್ರೇಮನೊಂದಿಗೆ ತಾವು ಆಗ ಅನುಭವಕ್ಕೆ ತಂದುಕೊಳ್ಳುತ್ತಿದ್ದ ವಿಷಯಗಳ ಜೊತೆಗೆ ಹಲವಾರು ಇನ್ನಿತರ ವಿಷಯಗಳನ್ನು ಕುರಿತು ಮಾತುಕತೆ ನಡೆಸುತ್ತಿದ್ದರು. ಈ ಚಿಂತನಗಳು ಇಲ್ಲವೆ ಅನುಭವಗಳು ಮತ್ತು ಈ ಅವಲೋಕನಗಳು ದೈವೀ ಪರಿವರ್ತನೆಯತ್ತ ನಡೆದ ಯುಗ ಪ್ರವರ್ತಕ ಘಟನೆಗಳ ರೂಪದಲ್ಲಿವೆ. ದೇಹದ ಯೋಗಕ್ಕಾಗಿ ಸ್ಥಾಪಿಸಬೇಕಾದ ಕಾರ್ಯಗತಿಗಳನ್ನು ಕುರಿತು ಜ್ಞಾನೋದಯವನ್ನುಂಟು ಮಾಡುತ್ತವೆ. ಇವು ಕೈಕೊಳ್ಳಬೇಕಾದ ಪ್ರಯತ್ನದ ಬಗ್ಗೆ ಒಂದು ಬಗೆಯ ಸೂಚನೆ ನೀಡಬಲ್ಲವು.

ಈ ಮಾತುಕತೆಗಳನ್ನು ಸತ್ಪ್ರೇಮ ದಾಖಲಿಸಿದ್ದರು ಮತ್ತು ಅವುಗಳನ್ನು 13 ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಅವು ಫ್ರೆಂಚ್ ಭಾಷೆಯಲ್ಲಿ "L' Agenda de Mere" ಹೆಸರಿನಡಿಯಲ್ಲಿ ಮತ್ತು ಇಂಗ್ಲೀಷ ಭಾಷೆಯಲ್ಲಿ "The Mother's Agenda" ಹೆಸರಿನಡಿಯಲ್ಲಿ ಪ್ರಕಟವಾಗಿವೆ.

ಇತ್ತೀಚೆಗೆ ಶ್ರೀಮಾತೆಯವರದೇ ಯೋಗ ಕುರಿತು ಇರುವ ಅವರ ಹೇಳಿಕೆಗಳನ್ನು ಈ 13 ಸಂಪುಟಗಳಿಂದ ಸಂಕಲನ ಮಾಡಲಾಗಿತ್ತು. ಹೊಸ ಅತಿಮಾನಸ ಪ್ರಜ್ಞೆಗಾಗಿರುವ ಅವರ ಯೋಗದ ಆಚರಣೆಗೆ ಸಂಬಂಧಿಸಿದ ಪಠ್ಯ ಭಾಗವನ್ನು ಡಿ. 2012ರಲ್ಲಿ ಪು. 422 ಮತ್ತು ಪು. 464 ಇರುವ ಎರಡು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಆ ಸಂಪುಟಗಳ ಶೀರ್ಷಿಕೆ "ಶ್ರೀಮಾತೆಯವರ ಯೋಗ 1956–1973" (The Mother's Yoga 1956-1973) ಎಂದಿದೆ.

ಅಖಿಲ ಭಾರತ ಪತ್ರಿಕೆಯ ಈ ಸಂಚಿಕೆಯಲ್ಲಿ ಆ ಎರಡು ಸಂಪುಟಗಳಿಂದ ಆಯ್ದ ಕೆಲವು ಪದಗುಚ್ಛಗಳನ್ನು ಪ್ರಕಟಿಸಲಾಗಿದೆ.

**ಅನು : ಡಾ. ಕೆ.ಎಸ್. ಆಮೂರ**

*

**ಫೆಬ್ರುವರಿ 29, 1956**

**ಅತಿಮಾನಸದ ಮೊದಲ ಪ್ರಕಟಣೆ**

(ಶ್ರೀ ಅರವಿಂದಾಶ್ರಮದ ಕ್ರೀಡಾಂಗಣದಲ್ಲಿ, ಬುಧವಾರ ದಿನಾಂಕ 29–2–1956 ರಂದು ಸಾಮೂಹಿಕ ಧ್ಯಾನದ ಸಮಯದಲ್ಲಾದ ಅವತರಣ)

ಈ ದಿನ ಸಾಯಂಕಾಲ ದೈವೀ ಸಾನ್ನಿಧ್ಯವು ಮೂರ್ತರೂಪದಲ್ಲಿ ಹಾಗೂ ಭೌತಿಕ ರೂಪದಲ್ಲಿ ನಿಮ್ಮ ಮಧ್ಯೆ ಒದಗಿ ಬಂದಿತ್ತು. ನನ್ನ ರೂಪ ವಿಶ್ವಕ್ಕಿಂತ ವಿರಾಟದ್ದೆನಿಸುವ ಜೀವಂತ ಸ್ವರ್ಣದ್ದಾಗಿತ್ತು. ಭಗವಂತನಿಂದ ಜಗತ್ತನ್ನು ಬೇರ್ಪಡಿಸುವ ಬೃಹತ್ ಹಿರಣ್ಮಯ ದ್ವಾರದೆದುರಿಗೆ ನಾನು ಮುಖ ಮಾಡಿ ನಿಂತಿದ್ದೆ.

ನಾನು ಆ ದ್ವಾರವನ್ನು ನಿರೀಕ್ಷಿಸುತ್ತಿದ್ದಂತೆ, ಒಂದು ಕ್ಷಣದ ದೈವೀಪ್ರಜ್ಞೆಯಲ್ಲಿ ಅದರ ರಹಸ್ಯವನ್ನು ಅರಿತುಕೊಂಡೆ ಮತ್ತು "ಮುಹೂರ್ತ ಸನ್ನಿಹಿತವಾಗಿದೆ" ಎಂದು ಸಂಕಲ್ಪಿಸಿದೆ ಮತ್ತು ನನ್ನ ಎರಡೂ ಕೈಗಳಿಂದ ಬಲಾಢ್ಯವಾದ ಸುವರ್ಣ ಸುತ್ತಿಗೆಯನ್ನು ಎತ್ತಿಕೊಂಡು ಒಂದು ಏಟು ಕೊಟ್ಟೆ, ಆ ಮಹಾದ್ವಾರಕ್ಕೆ ಒಂದೇ ಒಂದು ಏಟು ಕೊಟ್ಟೆ, ದ್ವಾರವು ಒಡೆದು ಚೂರು ಚೂರಾಯಿತು.

ನಂತರ ಅತಿಮಾನಸ ದೈವೀಪ್ರಕಾಶ, ದೈವೀಶಕ್ತಿ ಮತ್ತು ದೈವೀಪ್ರಜ್ಞೆ ಧಾರಾಕಾರವಾಗಿ ಪೃಥ್ವಿಯ ಮೇಲೆ ನುಗ್ಗಿ ಬಂದವು.

(Vol. 1, p. 69)

**ಸೆಪ್ಟಂಬರ 12, 1956**

... ಪ್ರಕಾಶ, ಅದು ಅತಿ ಮನಸ್ಸಿನ ಬಂಗಾರ ವರ್ಣವನ್ನು ಹೊಂದಿರಲಿಲ್ಲ. ಅದಕ್ಕೂ ಹೆಚ್ಚಾಗಿ ಕತ್ತಲಲ್ಲಿ ಉಂಟಾಗುವ ಒಂದು ಬಗೆಯ ಶಾಖರಹಿತ ಮಿನುಗಿನ ಹಾಗಿತ್ತು. ಆಗ ಕತ್ತಲಾಗಿದ್ದರೆ ಅದು ಭೌತಿಕವಾಗಿ ಕಾಣಿಸಿಕೊಳ್ಳುತ್ತಿತ್ತು ಎಂಬ ಭಾವನೆ ನನಗೆ ಬಂದಿತು.

... ಮತ್ತು ಅದು ನನ್ನ ಭೌತಿಕ ದೇಹಕ್ಕಿಂತ ಹೆಚ್ಚು ಸಾಂದ್ರ(dense)ವಾಗಿತ್ತು, ಭೌತಿಕ ದೇಹ ನನಗೆ ಅವಾಸ್ತವಿಕವಾದದ್ದೆನಿಸಿತು, ಅದು ನಿಮ್ಮ ಕೈಗಳಲ್ಲಿ ಪುಡಿ ಪುಡಿಯಾಗಿ ಉದುರಿ ಹೋಗುವ ಉಸುಕಿನ ಹಾಗಿತ್ತು.

... ಮಾತನಾಡಲು ನಾನು ಅಸಮರ್ಥಳಾಗಬಹುದಾಗಿತ್ತು, ಶಬ್ದಗಳು



ಎಷ್ಟೊಂದು ಕ್ಷುದ್ರ, ಸಂಕುಚಿತ ಮತ್ತು ಅಜ್ಞಾನದವಾದವುಗಳು ಎಂದು ನನಗೆ ತೋರಿಬಂದಿತು.

... ಇದನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ (ಅದನ್ನು ನಾನು ಹೇಗೆ ಹೇಳಲಿ?) ಕೆಲವೊಂದು ಮುಂಭಾಗದ ಸತ್ತೆಗಳಲ್ಲಿ ಒಂದರ ನಂತರ ಒಂದರಂತೆ ನಡೆಯುತ್ತಿದ್ದ ಸಿದ್ಧತೆಗಳನ್ನು ನಾನು ನೋಡಿದೆ.

... ನನಗೆ ಹಲವಾರು ಶಿರಗಳಿರುವವೇನೋ ಎಂಬ ಭಾವನೆಯನ್ನು ಅದು ತಂದುಕೊಟ್ಟಿತು.

... ಫೆಬ್ರುವರಿ 29ರ ಅನುಭವ ಸಾರ್ವತ್ರಿಕ ಸ್ವರೂಪದ್ದಾಗಿತ್ತು, ಆದರೆ ಇದು ನನಗಾಗಿ ಇದ್ದ ಒಂದು ಅನುಭವವಾಗಿತ್ತು.

... ಅಂತಹ ಅನುಭವ ನನಗೆ ಹಿಂದೆ ಎಂದೂ ಆಗಿರಲಿಲ್ಲ.

... ಅತಿಮಾನಸ ದೇಹ ಹೇಗಿರಬಹುದು ಎಂಬುದನ್ನು ನಾನು ನೋಡಲು ಪ್ರಾರಂಭಿಸುತ್ತೇನೆ.

... ಪರಮೋಚ್ಚ ಸೃಷ್ಟ್ಯಾತ್ಮಕ ತತ್ವದೊಂದಿಗೆ ಭೌತಿಕ ಪ್ರಜ್ಞೆ ಏಕತೆ ಪಡೆದಾಗ, ಹೆಚ್ಚು ಕಡಿಮೆ, ಇದೇ ಬಗೆಯ ಅನುಭವವಾಗಿತ್ತು. ಆದರೆ ಅದು ಸೂಕ್ಷ್ಮವಾದದ್ದಾಗಿತ್ತು, ಅದು ಹಾಗಿರುವಾಗ ಇದು ಭೌತಿಕದಲ್ಲಾಗಿತ್ತು – ದೇಹದಲ್ಲಾಗಿತ್ತು.

... ನನಗೆ ಅದು ಅನುಭವ ಮಾತ್ರವಾಗಿರಲಿಲ್ಲ, ನಾನು ಅದರತ್ತ ನೋಡಲಿಲ್ಲ, ಅದು ನಾನೇ ಆಗಿದ್ದೆ.

... ಅದು ನನ್ನಿಂದ ಹೊರಸೂಸಿತು. ಅಲ್ಲಿ ಉಪಸ್ಥಿತರಿದ್ದ ಪ್ರತಿಯೊಬ್ಬನಲ್ಲಿ ಅಸಂಖ್ಯಾತ ಚಿಕ್ಕ ಕಿಡಿಗಳು ಒಳನುಗ್ಗುತ್ತಿದ್ದುದನ್ನು ನಾನು ನೋಡಿದೆ.

... ಇನ್ನೊಂದು ಹೆಚ್ಚಿನ ಹೆಜ್ಜೆ ಮುಂದಿರಿಸಿದ ಹಾಗಿತ್ತು.

(Vol. 1, p. 85)

**ಸೆಪ್ಟಂಬರ 16, 1958**

(ತಮ್ಮ ಬಳಿ ಬಂದ ಮಂತ್ರಗಳನ್ನು ಕುರಿತು ಶ್ರೀಮಾತೆಯವರು ಮಾತನಾಡಿದರು)

ಆದರೆ ಈಗೇನು ಬರಲಿದೆ? ನಾನು ಸತತ **"ಓಂ ನಮೋ ಭಗವತೆ"** ಎಂಬ ಸಂಸ್ಕೃತ ಮಂತ್ರವನ್ನು ಕೇಳುತ್ತಿದ್ದೇನೆ.

ಅದು ಅಲ್ಲಿದೆ, ನನ್ನನ್ನು ಆವರಿಸಿದೆ, ಅದು ಎಲ್ಲ ಜೀವಕೋಶಗಳನ್ನು ಹಿಡಿದಿಟ್ಟುಕೊಳ್ಳುತ್ತದೆ, ಮತ್ತು ಒಮ್ಮೆಗೆ ಅವು ಆರೋಹಣದತ್ತ ಪುಟಿದೆದ್ದು ಸಾಗುತ್ತವೆ. ಹಾಗೆಯೇ ನಾರದನ ಮಂತ್ರ **"ನಾರಾಯಣ, ನಾರಾಯಣ ..."** ಕೂಡ ಬರುತ್ತಿದೆ.

(ಅದು ವಾಸ್ತವಿಕವಾಗಿ ಒಂದು ದೈವೀ ಆಜ್ಞೆ, ಅದರರ್ಥ ಈಗ ಹೇಳಿದ ಹಾಗೆ ಮಾಡುವಿ ಎಂದಿದೆ.) ಆದರೆ ಅದು ಹೃದಯದಿಂದ ಬರುತ್ತಿಲ್ಲ.

ಅದು ಏನಾಗಲಿದೆ?

ಅದು ಸರಳವಾಗಿ, ಒಮ್ಮೆಗೆ ಹೊಳಪಿನೊಂದಿಗೆ ಜಿಗಿದು ಮುಂದೆ ಬರುತ್ತದೆ ಮತ್ತು ಅದು ಬಹಳ ಸಾಮರ್ಥ್ಯಪೂರ್ಣವಾಗಿರುತ್ತದೆ. ಸಾಮರ್ಥ್ಯ ಮಾತ್ರ ಏನನ್ನಾದರೂ ಮಾಡಬಹುದು. ಪ್ರೇಮ ಉಸುಕಿನಲ್ಲಿ ಹರಿದು ಹೋಗುವ ನೀರಿನ ಹಾಗೆ ಮಾಯವಾಗುತ್ತದೆ, ಜನರು ಪರಮಾನಂದದಿಂದ ಉಳಿದುಕೊಳ್ಳುತ್ತಾರೆ ಮತ್ತು ಯಾವುದೂ ಚಲಿಸುವುದಿಲ್ಲ! ಇಲ್ಲ, ಸಾಮರ್ಥ್ಯದ ಆವಶ್ಯಕತೆ ಇದೆ. ಶಿವನ ಹಾಗೆ ಜೋರಾಗಿ ಕಲಕಲು, ಮಂಥನ ಮಾಡಲು ಸಾಮರ್ಥ್ಯ ಬೇಕಾಗುತ್ತದೆ. ...

ನನ್ನಲ್ಲಿ ಈ ಮಂತ್ರವಿದ್ದಾಗ ಹಲೋ, ಗುಡ್‌ಬಾಯ್ ಹೇಳುವುದರ ಬದಲಾಗಿ ಆ ಮಂತ್ರವನ್ನು ಹೇಳುತ್ತೇನೆ. ಹಲೋ ಎಂದು ನಾನು ಹೇಳಿದಾಗ ಅದರರ್ಥ "ದೈವೀ ಸಾನ್ನಿಧ್ಯ ಇಲ್ಲಿದೆ" ಎಂದಾಗಿರುತ್ತದೆ, 'ಗುಡ್‌ಬಾಯ್' ಹೇಳಿದಾಗ ಅದರರ್ಥ "ನಾನು ಹೊರಟುಹೋಗುವುದಿಲ್ಲ, ಇಲ್ಲಿಯೇ ಉಳಿದುಕೊಳ್ಳುತ್ತೇನೆ" ಎಂದಾಗಿರುತ್ತದೆ.

ನನ್ನಲ್ಲಿ ಈ ಮಂತ್ರವಿದ್ದಾಗ ವಿಶೇಷವಾದ ಏನಾದರೂ ಸಂಭವಿಸುತ್ತದೆ ಎಂಬ ನಂಬಿಕೆ ನನ್ನಲ್ಲಿದೆ.

(ಮೌನ)

ಸದ್ಯದ ಸಮಯದಲ್ಲಿ ಎಲ್ಲ ಸೂತ್ರಗಳು ಹಾಗೂ ಮಂತ್ರಗಳಲ್ಲಿ ಒಂದು ಅತಿ ಹೆಚ್ಚು ನೇರವಾಗಿ ದೇಹದ ಮೇಲೆ ಕಾರ್ಯ ಕೈಕೊಳ್ಳುತ್ತದೆ ಮತ್ತು ಕೂಡಲೆ (ಶ್ರೀಮಾತೆಯವರು ಕಂಪನವಾಗುತ್ತಿರುವುದನ್ನು ಸನ್ನೆ ಮಾಡಿ ತೋರಿಸುತ್ತಾರೆ) ಇದನ್ನು ಮಾಡುತ್ತದೆ. ಆ ಸಂಸ್ಕೃತ ಮಂತ್ರ "ಓಂ ನಮೋ ಭಗವತೆ".



ನಾನು ಧ್ಯಾನಕ್ಕಾಗಿ ಕುಳಿತುಕೊಂಡ ಕೂಡಲೆ, ಏಕಾಗ್ರತೆಗಾಗಿ ಒಂದು ಅಚಂಚಲವಾದ ನಿಮಿಷವಿದ್ದಾಗ ಧ್ಯಾನ ಆ ಮಂತ್ರದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ದೇಹದಲ್ಲಿ, ದೇಹದ ಜೀವಕೋಶಗಳಲ್ಲಿ ಅದಕ್ಕೆ ಪ್ರತಿಸ್ಪಂದನೆ ಇರುತ್ತದೆ. ಜೀವಕೋಶಗಳು ಕಂಪಿಸಲು ಪ್ರಾರಂಭಿಸುತ್ತವೆ.

ಆ ಮಂತ್ರದ ಮೊದಲನೆಯ ಪದಭಾಗವಾದ ನಮೋ (Namo) ದಲ್ಲಿಯ 'ನ' ಭಾಗವನ್ನು ಚಿಕ್ಕದಾಗಿ ಮಾಡಿ ಉಚ್ಚರಿಸಲಾಗುತ್ತದೆ, ಕೊನೆಯ ಭಾಗವನ್ನು ಭ–ಗ–ವ–ತೆ ಎಂದು ಉಚ್ಚರಿಸಲಾಗುತ್ತದೆ.

ಅದು ಸಂಭವಿಸಿದ್ದು ಹೀಗೆ: Y ಎಂಬುವವನು ಆಗ ಮರಳಿ ಬಂದಿದ್ದನು ಮತ್ತು ತನ್ನೊಡನೆ ಒಂದು ಟ್ರಂಕಿನ ತುಂಬ ವಸ್ತುಗಳನ್ನು ತಂದಿದ್ದನು. ನಂತರ ಅವುಗಳನ್ನು ನನಗೆ ತೋರಿಸಲು ಪ್ರಾರಂಭಿಸಿದನು. ಅವನ ಉದ್ವೇಗ ವಾತಾವರಣದಲ್ಲಿ ಬಿಗುವಿನ ತರಂಗಗಳನ್ನುಂಟು ಮಾಡಿತು, ಅದು ನನಗೆ ತಲೆಶೂಲೆ ತಂದಿತು. – ಏನೇ ಇರಲಿ, ಅದು ಅಸಂತೋಷಕರವಾಗಿತ್ತು. ಅದನ್ನು ಬಿಟ್ಟುಕೊಟ್ಟು ಹೋಗಿ ನಾನು ಕುಳಿತುಕೊಂಡೆ ಮತ್ತು (ಅದನ್ನು ಒರೆಸಿ ಹಾಕುವ ಸನ್ನೆಯನ್ನು ಶ್ರೀಮಾತೆಯವರು ಮಾಡುತ್ತಾರೆ) ಅದು ನಿಂತು ಹೋಗುವಂತೆ ಮಾಡಿದೆ. ಕೂಡಲೆ ಮಂತ್ರ ಪ್ರಾರಂಭವಾಯಿತು.

ಅದು ಸೌರ ನರಮಂಡಲ (Solar plexus) ದಿಂದ ಮೇಲೆದ್ದು ಬಂದಿತು. ಓಂ ನಮೋ ಭಗವತೆ, ಓಂ ನಮೋ ಭಗವತೆ (ಅದು ಹೀಗೆ ಬಂದಿತೆಂದು ಸನ್ನೆ ಮಾಡಿ ತೋರಿಸುತ್ತಾರೆ) ಅದು ಪ್ರಚಂಡವಾಗಿತ್ತು. ಧ್ಯಾನದಲ್ಲಿ ಉಳಿದುಕೊಂಡಿದ್ದ ಕಾಲುಗಂಟೆಯವರೆಗೆ ಪ್ರತಿಯೊಂದೂ ಪ್ರಕಾಶದಿಂದ ತುಂಬಿಕೊಂಡಿತ್ತು. ದೇಹಸ್ಥಿತಿಯ ಆಳಾತಿ ಆಳದಲ್ಲಿ ಆ ಪ್ರಕಾಶ ಕಂದುಬಣ್ಣ ಮಿಶ್ರಿತ ಬಂಗಾರ ವರ್ಣದ್ದಾಗಿತ್ತು (ಕೊರಳಿನ ಹತ್ತಿರ ಅದು ಬಹುಮಟ್ಟಿಗೆ ಕೆಂಪು ಬಣ್ಣದ್ದಾಗಿತ್ತು) ಮತ್ತು ದೇಹಸ್ಥಿತಿಯ ಉಚ್ಚ ಮಟ್ಟದಲ್ಲಿ ಅದು ಒಂದು ಬಗೆಯ ಉಜ್ವಲ ವರ್ಣವನ್ನು ಪ್ರತಿಫಲಿಸುವ (Opaline) ಬಿಳಿ ಬಣ್ಣದ್ದಾಗಿತ್ತು: ಓಂ ನಮೋ ಭಗವತೆ, ಓಂ ನಮೋ ಭಗವತೆ, ಓಂ ನಮೋ ಭಗವತೆ.

ಇನ್ನೊಂದು ದಿನ (ನಾನು ಅಟ್ಟದ ಮೇಲಿನ ಸ್ನಾನದ ಕೋಣೆಯಲ್ಲಿದ್ದಾಗ) ಅದು ಬಂದಿತು, ಅದು ನನ್ನ ಇಡೀ ದೇಹವನ್ನು ಹಿಡಿದುಕೊಂಡಿತು. ಅದೇ ರೀತಿಯಲ್ಲಿ ಮೇಲೆದ್ದು ಬಂದಿತು ಮತ್ತು ಎಲ್ಲ ಜೀವಕೋಶಗಳು ನಡುಗತೊಡಗಿದ್ದವು, ಅವು ಅದ್ಭುತ ಸಾಮರ್ಥ್ಯದಿಂದ ಹಾಗೆ ಮಾಡತೊಡಗಿದ್ದವು.

ಹಾಗಾಗಿ ನಾನು ಎಲ್ಲ ಕಾರ್ಯವನ್ನು, ಚಲನೆಯನ್ನು ನಿಲ್ಲಿಸಿದೆ ಮತ್ತು ಆ ವಿಷಯ ಬೆಳೆಯಲು ಅನುವು ಮಾಡಿಕೊಟ್ಟೆ. ಶಬ್ದ ವಿಸ್ತಾರಗೊಳ್ಳುತ್ತಿದ್ದ ಹಾಗೆ ದೇಹದ ಎಲ್ಲ ಜೀವಕೋಶಗಳು ಮುಂಚಾಚಿಕೊಳ್ಳತೊಡಗಿದವು, ವಿಸ್ತಾರಗೊಂಡವು, ಗಾಢವಾದ ಅಭೀಪ್ಸೆಯ ಹಿಡಿತಕ್ಕೊಳಗಾಗತೊಡಗಿದವು. – ದೇಹವೇ ಉಬ್ಬಿಕೊಳ್ಳುತ್ತಿರುವ ಹಾಗಿತ್ತು – ಸಹಿಸಲಾರದಂತಾಯಿತು. ಅದು ಸ್ಫೋಟಗೊಳ್ಳುವುದೇನೋ ಎಂಬ ಭಾವನೆ ನನಗೆ ಬಂದಿತು.

ತಮ್ಮನ್ನು ಪ್ರತಿಯೊಂದರಿಂದ ಒಳಗೆಳೆದುಕೊಂಡು ಆ ರೀತಿ ಇಡಿಯಾಗಿ ಜೀವಿಸುವವರನ್ನು ನಾನು ಅರ್ಥಮಾಡಿಕೊಂಡೆ.

ಪರಿವರ್ತನೆಗೊಳಪಡಿಸುವ ಅದ್ಭುತ ಸಾಮರ್ಥ್ಯ ಅದಕ್ಕಿತ್ತು. ಅದು ಹಾಗೆಯೇ ಮುಂದುವರಿದರೆ ದೇಹದ ಜೀವಕೋಶಗಳ ಸಮತೋಲನದಲ್ಲಿ ಬದಲಾವಣೆ–ಯಾಗುವಂತಹ ಏನೋ ಒಂದು ಸಂಭವಿಸಬಹುದೆಂಬ ಭಾವನೆ ನನಗೆ ಬಂದಿತು.

ದುರ್ದೈವವಶಾತ್ ಅದನ್ನು ಮುಂದುವರಿಸಿಕೊಂಡು ಹೋಗಲು ನನಗೆ ಸಾಧ್ಯವಾಗಲಿಲ್ಲ. ನನಗೆ ಸಮಯವಿರುವುದಿಲ್ಲ, ಅದು ಬಾಲ್ಕನಿ ದರ್ಶನಕ್ಕೆ ಇನ್ನು ಸ್ವಲ್ಪ ಸಮಯವಿದ್ದಾಗ ಬಂದಿತ್ತು. ನನ್ನಿಂದ ತಡವಾಗಬಹುದಾಗಿತ್ತು. "ಅದು ಬೇರೆ ಕೆಲಸ ಇಲ್ಲದವರಿಗಾಗಿ" ಎಂದು ಏನೋ ಒಂದು ನನಗೆ ಹೇಳಿತು. ಆಗ "ನನ್ನ ಕಾರ್ಯಕ್ಕೆ ನಾನು ಸೇರಿದವಳಾಗಿದ್ದೇನೆ" ಎಂದು ಹೇಳಿದೆ ಮತ್ತು ಅದರಿಂದ ಹಿಂದೆ ಸರಿದುಕೊಂಡೆ. ಅದಕ್ಕೆ ಬ್ರೇಕು (break) ಹಾಕಿದೆ. ಮತ್ತು ಆ ಕ್ರಿಯೆಯನ್ನು ಸ್ವಲ್ಪದಕ್ಕೆ ನಿಲ್ಲಿಸಲಾಯಿತು. ಉಳಿದುಕೊಂಡದ್ದೇನೆಂದರೆ ನಾನು ಮಂತ್ರವನ್ನು ಜಪಿಸಿದಾಗೆಲ್ಲ ಪ್ರತಿಯೊಂದು ಕಂಪಿಸಲು ಪ್ರಾರಂಭಿಸುವುದಾಗಿದೆ.

ಹಾಗಾಗಿ ಪ್ರತಿಯೊಬ್ಬನು, ವೈಯಕ್ತಿಕವಾಗಿ, ತನ್ನ ಮೇಲೆ ಕ್ರಿಯೆ ಕೈಕೊಳ್ಳಬಹುದಾದ ಏನನ್ನಾದರೂ ಕಂಡುಹಿಡಿಯಬೇಕು. ನಾನು ಭೌತಿಕ ಸ್ತರದ ಮೇಲಿನ ಕ್ರಿಯೆಯನ್ನು ಮಾತ್ರ ಕುರಿತು ಹೇಳುತ್ತಿದ್ದೇನೆ, ಏಕೆಂದರೆ ಮಾನಸಿಕವಾಗಿ, ಪ್ರಾಣಿಕವಾಗಿ ನಮ್ಮ ಸತ್ತೆಯ ಎಲ್ಲ ಆಂತರಿಕ ಭಾಗಗಳಲ್ಲಿ ಅಭೀಪ್ಸೆ, ಸತತ, ಸ್ವಯಂಪ್ರೇರಿತವಾಗಿ ಇರುತ್ತದೆ. ನಾನು ಕೇವಲ ಭೌತಿಕ ಸ್ತರಕ್ಕೆ ಸೇರಿದ್ದನ್ನು ಕುರಿತು ಹೇಳುತ್ತಿದ್ದೇನೆ.

ಹಾಗಾಗಿ ಈ ಮಂತ್ರಗಳೊಡನೆ ನೀವು ಏನು ಮಾಡಲಿದ್ದೀರಿ ಎಂಬುದರ ಮೇಲೆ ಪ್ರತಿಯೊಂದು ಅವಲಂಬಿಸಿರುತ್ತದೆ. ನಾನು ಚಿಕ್ಕ ಮಂತ್ರಗಳನ್ನು



ಇಷ್ಟಪಡುತ್ತೇನೆ, ವಿಶೇಷವಾಗಿ ಬಹು ಸಂಖ್ಯೆಯಲ್ಲಿ, ಸ್ವಯಂಪ್ರೇರಿತವಾದ ಪುನರುಚ್ಚಾರಣೆ ಮಾಡುವುದಕ್ಕೆ ಅದು ಅನುಕೂಲಕರವಾಗುತ್ತದೆ. – ಒಂದು ಅಥವಾ ಎರಡು ಶಬ್ದಗಳು, ಅತಿ ಹೆಚ್ಚೆಂದರೆ ಮೂರು ಶಬ್ದಗಳಿರಬೇಕು. ಏಕೆಂದರೆ ಅದು ಎಲ್ಲ ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುವಂತಿರಬೇಕು. ಉದಾಹರಣೆಗೆ ಅಪಘಾತ ಸಂಭವಿಸಲಿದೆ ಎನ್ನುವ ಕ್ಷಣ, ಯೋಚನೆಯ ಇಲ್ಲವೆ ಕರೆಕೊಡುವುದರ ಆಧಾರ ಪಡೆಯದೆ ಅದು ಜಿಗಿದು ಬರಬೇಕು. ಅದು ನಿಖರವಾಗಿ ಸತ್ತೆಯಿಂದ ಪ್ರತಿಫಲಿತವಾದ ಪ್ರಕಾಶದ ಹಾಗೆ ಹೊರಹರಿಯಬೇಕು, ಆಗ ಮಂತ್ರಕ್ಕೆ ಪೂರ್ಣಶಕ್ತಿಯಿರುತ್ತದೆ.

ನನಗೆ ಯಾವುದೇ ವಿಶೇಷ ಪೂರ್ವಮಗ್ನತೆ ಇಲ್ಲವೆ ತೊಂದರೆಗಳು ಇಲ್ಲದ ದಿನಗಳಂದು (ನಾನು ಸಾಮಾನ್ಯವೆಂದು ಕರೆಯುವ ಹಾಗೂ ನಾನು ಸಾಮಾನ್ಯಳಾಗಿರುವ ದಿನಗಳು) ನಾನು ಕೈಕೊಳ್ಳುವ ಪ್ರತಿಯೊಂದು, ನನ್ನ ದೇಹದ ಎಲ್ಲ ಚಲನೆಗಳು, ನಾನು ಉಚ್ಚರಿಸುವ ಎಲ್ಲ ಶಬ್ದಗಳು, ಮಾಡಿ ತೋರಿಸುವ ಎಲ್ಲ ಇಂಗಿತ ಸೂಚನೆಗಳು ಇವೆಲ್ಲವುಗಳ ಜೊತೆಗೆ 'ಓಂ ನಮೋ ಭಗವತೆ' ಮಂತ್ರವಿರುತ್ತದೆ ಇಲ್ಲವೆ ಅವೆಲ್ಲವುಗಳನ್ನು ಆ ಮಂತ್ರ ಮೇಲಕ್ಕೆತ್ತಿ ಹಿಡಿದಿರುತ್ತದೆ. ಇದು ಎಲ್ಲ ಸಮಯದಲ್ಲಿ ಆಗುತ್ತಿರುತ್ತದೆ.

ಅದೇ ಸರ್ವಸಾಮಾನ್ಯ ಸ್ಥಿತಿ, ಅದು ಸೂಕ್ಷ್ಮ ಭೌತಿಕಕ್ಕಿಂತ ಹೆಚ್ಚು ಭೌತಿಕವಾದ ಗಾಢತೆ ಇರುವ ವಾತಾವರಣವನ್ನು ಸೃಷ್ಟಿಸುತ್ತದೆ. ಅದು ಮಾಧ್ಯಮವೊಂದರಿಂದ ಕತ್ತಲಲ್ಲಿ ಮಿನುಗುವ ವಿಕಿರಣ ಬರುತ್ತಿದ್ದ ಹಾಗಿರುತ್ತದೆ. ಅದಕ್ಕೆ ಬಹಳ ಶ್ರೇಷ್ಠ ಕ್ರಿಯಾಶಕ್ತಿ ಇರುತ್ತದೆ, ಅದು ಅಪಘಾತವೊಂದನ್ನು ತಡೆಯಬಹುದು, ಅದು ನಮ್ಮೊಡನೆ ಸದಾ ಜೊತೆಗಿರುತ್ತದೆ.

ಅದರೊಂದಿಗೆ ಏನನ್ನು ಮಾಡಬೇಕು ಎಂಬುದು ನಿಮಗೆ ಬಿಟ್ಟುಕೊಟ್ಟ ವಿಷಯವಾಗಿರುತ್ತದೆ.

**ಸತ್ಪ್ರೇಮ :** ಅಭೀಪ್ಸೆಯನ್ನು ಪೋಷಿಸಿಕೊಂಡು ಬರುವುದು – ನೆನಪಿನಲ್ಲಿಟ್ಟು–ಕೊಳ್ಳುವುದು. ನಾವು ಸುಲಭವಾಗಿ ಮರೆವಿನ ಸ್ಥಿತಿಯಲ್ಲಿ ಬಿದ್ದುಬಿಡುತ್ತೇವೆ. ಅದು ಸ್ವಯಂಚಾಲಿತವಾಗುವಂತಹದನ್ನು ಸೃಷ್ಟಿಸಬೇಕು.

**ಶ್ರೀಮಾತೆ :** ಜೀವಂತವಿರುವ ಭಾವನೆ ತಂದುಕೊಡುವ ಯಾವ ಮಂತ್ರಗಳೂ ನಿನ್ನ ಬಳಿ ಬಂದಿಲ್ಲವೆ? ... ದೀರ್ಘ ಮಂತ್ರಗಳಿವೆಯೆ?

**ಸತ್ಪ್ರೇಮ :** ಹೌದು, ಮಂತ್ರಗಳು ದೀರ್ಘವಾಗಿವೆ. ಅವನು ಶ್ರೀಮಾತೆಯವರನ್ನು ಕುರಿತು ಯಾವ ಮಂತ್ರವನ್ನೂ ಕೊಟ್ಟಿಲ್ಲ. ... ಅವು ಅಸ್ತಿತ್ವದಲ್ಲಿವೆ, ಆದರೆ ಅವನು ನನಗೆ ಯಾವುದನ್ನೂ ಕೊಟ್ಟಿಲ್ಲ. ಅವು ನನ್ನ ಮೇಲೆ ಹೆಚ್ಚು ಪರಿಣಾಮವನ್ನುಂಟು–ಮಾಡುತ್ತವೆಯೋ ಎಂಬುದು ನನಗೆ ತಿಳಿದಿಲ್ಲ. ಅದು ಮಾನಸಿಕವಾದ ಏನೋ ಒಂದು.

**ಶ್ರೀಮಾತೆ :** ಆ ಕಾರಣದಿಂದಾಗಿಯೇ ಅದು ನಿನ್ನಿಂದ ಪುಟಿದೆದ್ದು ಬರಬೇಕು.

(ಮೌನ)

"ಓಂ ನಮೋ ಭಗವತೆ" ಮಂತ್ರ ಕೆಲಕಾಲದ ನಂತರ ಬಂದಿತು, ಏಕೆಂದರೆ ನನ್ನದೇ ಒಂದು ಮಂತ್ರವಿರಬೇಕು ಎಂಬ ಭಾವನೆ ನನಗೆ ಬಂದಿತ್ತು. ಆ ಮಂತ್ರ ನನ್ನ ದೇಹ ಈ ಜಗತ್ತಿನಲ್ಲಿ ಕೈಕೊಳ್ಳಬೇಕಾದುದಕ್ಕೆ ಸಮಂಜಸವಾಗಿರಬೇಕಾಗಿತ್ತು. ಮತ್ತು ಆ ಸಮಯದಲ್ಲಿ ಅದು ಬಂದಿತು. ಆವಶ್ಯಕತೆ ಎಂದು ಬಂದ ಭಾವನೆಗೆ ಅದು ನಿಜವಾದ ಉತ್ತರವಾಗಿತ್ತು. ಹಾಗಾಗಿ ನಿನಗೆ ಅವಶ್ಯವೆನಿಸಿದರೆ – ನಿನ್ನ ಶಿರದಲ್ಲಲ್ಲ, ಆದರೆ ಇಲ್ಲಿ (ಶ್ರೀಮಾತೆಯವರು ಹೃದಯ ಕೇಂದ್ರದತ್ತ ಬೆರಳು ಮಾಡಿ ತೋರಿಸುತ್ತಾರೆ) ಅದು ಬರುವುದು. ಒಂದು ದಿನ ನೀನು ಆ ಶಬ್ದಗಳನ್ನು ಕೇಳಿಸಿಕೊಳ್ಳುವಿ ಇಲ್ಲವೆ ಅವು ನಿನ್ನ ಹೃದಯದಿಂದ ಪುಟಿದೆದ್ದು ಬರುತ್ತವೆ. ಅದು ಸಂಭವಿಸಿದಾಗ ನೀನು ಅದನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಬೇಕು.

(Vol. 1, p. 194)

**ಜುಲೈ 24–25, 1959**

ದೇಹದಲ್ಲಿ ಅತಿಮಾನಸ ಶಕ್ತಿ ಮೊದಲ ಸಲ ಒಳನುಗ್ಗಿ ಬಂದಿತು.

ಶ್ರೀ ಅರವಿಂದರು ಮೂರ್ತರೂಪದ, ಶಾಶ್ವತ ಸೂಕ್ಷ್ಮಭೌತಿಕ ಶರೀರದಲ್ಲಿ ಜೀವಂತವಾಗಿದ್ದಾರೆ.

(Vol. 1, p. 325)

**ಏಪ್ರಿಲ್ 13, 1962**

(ಶ್ರೀಮಾತೆಯವರು ಅಪಾಯಕಾರಕವಾದ ತಿಂಗಳೊಂದನ್ನು ಕಳೆದನಂತರ ಅವರಿಗೆ ಪ್ರಬಲವಾದ ನಿರ್ಣಾಯಕ ಅನುಭವ ಒಮ್ಮೆಗೆ ಉಂಟಾಯಿತು. ಅವರು ತಮ್ಮ ಮೊದಲ ಸಂದೇಶ ನೀಡುತ್ತಾರೆ. ಅಟ್ಟದ ಮೇಲಿನ ಕೋಣೆಯಲ್ಲಿ ತಮ್ಮ ಹಾಸಿಗೆಯ ಮೇಲೆ ಒರಗಿಕೊಂಡಿದ್ದಾರೆ. ಅವರ ದೇಹ ಬಹಳ ಸೊರಗಿ ಹೋಗಿದೆ. ಮುಂಜಾನೆಯ ಹತ್ತು ಗಂಟೆಯ ಸಮಯ. ಅವರ ಧ್ವನಿ ಬಹಳ



ಬದಲಾಗಿದೆ. ದೂರದಲ್ಲಿ ಆಟವಾಡುತ್ತಿರುವ ಶಾಲಾಮಕ್ಕಳ ಕಲರವ ಕೇಳಿಬರುತ್ತಿದೆ.)

**ಏಪ್ರಿಲ್ 12–13ರ ರಾತ್ರಿ:**

ಜಗತ್ತಿನ ಯೋಗ ಎಂದು ಕರೆಯಬಹುದಾದುದರ ಬಗ್ಗೆ ಪೂರ್ತಿ ಅರಿವಿನೊಂದಿಗೆ ರಾತ್ರಿ ಒಮ್ಮೆಗೆ ನನಗೆ ಎಚ್ಚರವಾಯಿತು. ದೊಡ್ಡ ಪ್ರಮಾಣದಲ್ಲಿರುವ ಲಯಬದ್ಧವಾಗಿ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳೊಂದಿಗೆ ಪರಮೋಚ್ಚ ದೈವೀಪ್ರೇಮ ಪ್ರಕಟವಾಗುತ್ತಿತ್ತು. ಆ ಲಯಬದ್ಧತೆಯೊಂದಿಗೆ ಜಗತ್ತನ್ನು ಮುಂದೆ ತರುತ್ತಿತ್ತು. ಅದು ಸನಾತನ, ವಿಸ್ಮಯಕಾರಕ ದೈವೀಪ್ರೇಮದ ಪ್ರಬಲ ಲಯಬದ್ಧತೆ, ಕೇವಲ ದೈವೀಪ್ರೇಮ, ದೈವೀಪ್ರೇಮದ ಪ್ರತಿಯೊಂದು ಲಯಬದ್ಧತೆ ಜಗತ್ತನ್ನು ಅದರ ಪ್ರಕಟಣೆಯಲ್ಲಿ ಕೊಂಡೊಯ್ಯುತ್ತಿತ್ತು.

ಮತ್ತು ಕೈಕೊಳ್ಳಬೇಕಾಗಿದ್ದುದನ್ನು ಕೈಕೊಳ್ಳಲಾಗಿದೆ ಮತ್ತು ಪರಮೋಚ್ಚ ದೈವೀ ಪ್ರಕಟಣೆಯನ್ನು ಸಿದ್ಧಿಸಿಕೊಳ್ಳಲಾಗಿದೆ ಎಂಬ ಸುನಿಶ್ಚಿತತೆಯಿತ್ತು.

ಪ್ರತಿಯೊಂದೂ ದೈವೀ ವ್ಯಕ್ತಿವಿಶಿಷ್ಟತೆಯದಾಗಿತ್ತು. ಯಾವುದೂ ವ್ಯಕ್ತಿಗತವಾಗಿರಲಿಲ್ಲ.

ಇದು ಸಾಗಿ ಹೋಗುತ್ತಲೇ ಇತ್ತು.

ಕೈಕೊಳ್ಳಬೇಕಾಗಿದ್ದುದನ್ನು ಕೈಕೊಳ್ಳಲಾಗಿದೆ ಎಂಬ ಸುನಿಶ್ಚಿತತೆ.

ಮಿಥ್ಯೆಯ ಎಲ್ಲ ಪರಿಣಾಮಗಳು ಮಾಯವಾಗಿದ್ದವು. ಮೃತ್ಯು, ರೋಗ, ಅವಿದ್ಯೆ ಭ್ರಮೆಗಳಾಗಿದ್ದವು, – ಅವು ನೈಜತೆಯಿಲ್ಲದ, ಅಸ್ತಿತ್ವವಿಲ್ಲದ ವಿಷಯಗಳ ಹಾಗಿದ್ದವು. ಕೇವಲ ದೈವೀಪ್ರೇಮ, ಗಾಢ, ಪ್ರಬಲ, ವಿಸ್ಮಯಕಾರಕ, ಎಲ್ಲವನ್ನೂ ಕೊಂಡೊಯ್ಯುತ್ತಿರುವ ಪ್ರೇಮ ಅದಾಗಿತ್ತು.

ಅದನ್ನು ಜಗತ್ತಿನಲ್ಲಿ ಅಭಿವ್ಯಕ್ತಪಡಿಸುವುದು ಹೇಗೆ? ಅದೊಂದು ಅಸಾಧ್ಯತೆಯ ಹಾಗಿತ್ತು, ಕಾರಣ ಅಲ್ಲಿ ವೈರುಧ್ಯವಿತ್ತು. ಆದರೆ ನಂತರ ಅದು ಬಂದಿತು: "ಈ ಜಗತ್ತು ಅತಿಮಾನಸ ದೈವೀ ಸತ್ಯವನ್ನು ಅರಿತುಕೊಳ್ಳಬೇಕು ಎಂಬುದನ್ನು ಒಪ್ಪಿಕೊಂಡಿರುವಿ ... ಮತ್ತು ಅದನ್ನು ಇಡಿಯಾಗಿ, ಸಮಗ್ರವಾಗಿ ಅಭಿವ್ಯಕ್ತಪಡಿಸಲಾಗುವುದು." ಹೌದು.

ಮತ್ತು ಆ ಕಾರ್ಯವನ್ನು ಕೈಕೊಳ್ಳಲಾಗಿದೆ.

(ದೀರ್ಘ ಮೌನ)

ವ್ಯಕ್ತಿಗತ ಪ್ರಜ್ಞೆ ಮರಳಿ ಬಂದಿತು, ಮಿತಿಯಿರುವುದರ ಭಾವನೆ ನೋವಿರುವುದರ ಮಿತಿಗೊಳಪಡುವಿಕೆ, ಅದಿಲ್ಲದೆ ವ್ಯಕ್ತಿಯಿರುವುದಿಲ್ಲ.

ವಿಜಯದ ಬಗ್ಗೆ ನಿಶ್ಚಿತತೆ ಹೊಂದಿ ನಾವು ಮತ್ತೆ ಮಾರ್ಗದಲ್ಲಿ ಸಾಗತೊಡಗುತ್ತೇವೆ.

ಸ್ವರ್ಗಗಳು ವಿಜಯದ ಸಂಗೀತವಿರುವ ಧ್ವನಿ ಹೊರಡಿಸುತ್ತವೆ.

ದೈವೀಸತ್ಯ ಮಾತ್ರ ಅಸ್ತಿತ್ವದಲ್ಲಿದೆ, ದೈವೀಸತ್ಯ ಮಾತ್ರ ಪ್ರಕಟವಾಗುವುದು. ಮುಂದೆ, ಇನ್ನೂ ಮುಂದೆ ಸಾಗಬೇಕಾಗಿದೆ!

Gloire à Toi, Seigneur, Triomphateur Suprême!

(ಮೌನ)

ಮತ್ತು ಈಗ ಕಾರ್ಯದತ್ತ ಗಮನ ಹರಿಸೋಣ.

ತಾಳ್ಮೆ, ... ಪ್ರಯತ್ನಶೀಲತೆ ... ಪರಿಪೂರ್ಣ ಸಮಚಿತ್ತತೆ ಮತ್ತು ಪರಿಪೂರ್ಣ ನಂಬಿಕೆ.

(ಮೌನ)

ಆ ಅನುಭವಕ್ಕೆ ಹೋಲಿಸಿದರೆ, ಅದನ್ನು ಕುರಿತು ನಾನು ಏನೇ ಹೇಳಲಿ, ಅದೇನೂ ಅಲ್ಲವೇ ಅಲ್ಲ. ಅದರಲ್ಲಿ ಕೇವಲ ಶಬ್ದಗಳಿರುತ್ತವೆ.

ಮತ್ತು ನಮ್ಮ ಪ್ರಜ್ಞೆ ಅದೇ ಆಗಿದೆ, ಪರಿಪೂರ್ಣವಾಗಿ ದೈವೀಪ್ರಭುವಿನದೇ ಆಗಿದೆ. ಅದರಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ನಾವು ಆ ದೈವೀ 'ತತ್' ಆಗಿದ್ದೇವೆ.

(ಮೌನ)

ನಂತರ ಅದನ್ನು ಹೆಚ್ಚು ಸ್ಪಷ್ಟವಾಗಿ ವಿವರಿಸಿ ಹೇಳುತ್ತೇನೆ. ಉಪಕರಣ ಇನ್ನೂ ತಯಾರಾಗಿಲ್ಲ.

ಅದು ಕೇವಲ ಪ್ರಾರಂಭ.

....



(ಶ್ರೀಮಾತೆಯವರು ನಂತರ ಹೆಚ್ಚಿನದನ್ನು ಹೇಳಿದರು:)

ಆ ಅನುಭವ ಕನಿಷ್ಠಪಕ್ಷ ನಾಲ್ಕು ಗಂಟೆಗಳ ಕಾಲ ಉಳಿದುಕೊಂಡಿತ್ತು. ಬಹಳಷ್ಟು ವಿವರಗಳಿವೆ. ಅವುಗಳನ್ನು ಕುರಿತು ನಂತರ ಮಾತನಾಡುತ್ತೇನೆ.

(Vol. 3, p. 131)

**ಡಿಸೆಂಬರ 21, 1963**

ನನ್ನ ಕ್ರಿಯಾಶೀಲ ಪ್ರಜ್ಞೆಯಲ್ಲಿರುವ, ಅಷ್ಟೊಂದು ತೀಕ್ಷ್ಣವಾಗಿರುವ, ವಿಧಿರೂಪದ (imperative) ಸೂಕ್ಷ್ಮ ಗ್ರಹಣಶಕ್ತಿಯನ್ನು ತೆಗೆದು ಹಾಕಲು ಏನೋ ಒಂದು ಒತ್ತಡ ತರುತ್ತಿದೆ ಎಂಬ ಭಾವನೆ ನನ್ನಲ್ಲಿದೆ. – ಆ ಶಕ್ತಿ ಒಂದು ದರ್ಶನರೂಪದಲ್ಲಿದೆ (ಹಿಂದೊಂದು ದಿನ ದೂರದ ಸ್ಥಿತಿ ಮತ್ತು ಹತ್ತಿರದ ಸ್ಥಿತಿ ಕುರಿತು ನನಗಾದ ದರ್ಶನದ ಹಾಗಿದೆ). ಆ ದರ್ಶನ ಬಹುಮಟ್ಟಿಗೆ ಸೂಕ್ಷ್ಮದರ್ಶಕ ತೋರಿಸಿಕೊಡುವಷ್ಟು ನಿಖರವಾಗಿತ್ತು. ಸ್ಪಷ್ಟವಾಗಿ ಇದು ಇರಬಾರದ ವಿಷಯಗಳನ್ನು ತೊಡೆದುಹಾಕುವುದಕ್ಕಾಗಿ ಸಹಾಯಕವಾಗಿದೆ. ಆದರೆ ಈಗ ಈ ಮನೋಭಾವ ಹಿಂಭಾಗಕ್ಕೆ ಸರಿದು ಹೋಗಲಿ ಮತ್ತು ಕ್ರಿಯಾಶೀಲ ಪ್ರಜ್ಞೆ ಸತತ, ಬಹುಮಟ್ಟಿಗೆ ಪ್ರತ್ಯೇಕವಾಗಿ, ಕೇವಲ 'ಏನಿರಬೇಕಾಗಿದೆ' ಎಂಬುದನ್ನು ನೋಡುವಂತಾಗಲಿ ಎಂಬ ಸಂಕಲ್ಪವಿದೆ.

ಅದರರ್ಥ ತೆಗೆದು ಹಾಕಲು, ತಿರಸ್ಕರಿಸಲು ಒಂದು ಸೆಕೆಂಡಿನ ಕಾಲದ ಪರಿವರ್ತನೆಗೊಳಪಡಿಸುವ ಚಲನೆಗಳಿವೆ ಮತ್ತು ರಚನೆಯ ಚಲನೆಗಳಿವೆ. – ರಚನೆಯ ಚಲನೆಗಳಲ್ಲಿ ಹೆಜ್ಜೆ ಇರಿಸಬೇಕಾದ ಕಾಲ ಸನ್ನಿಹಿತವಾಗಿದೆ ಎಂದು ತೋರಿಬರುತ್ತಿದೆ.

ದೇಹ ಪ್ರಜ್ಞೆ, ಇನ್ನೂ ಬಹಳ ಅಂಜುಬುರುಕವಾಗಿದೆ, ತನ್ನಲ್ಲಿ ತನಗೆ ಆತ್ಮವಿಶ್ವಾಸ (ಗಾಢ ನಂಬಿಕೆ) ಇಲ್ಲ ಎಂಬ ಅರ್ಥದಲ್ಲಿ ಅಂಜುಬುರುಕವಾಗಿದೆ. ಅದು ಸತತ ಜಾಗರೂಕವಾಗಿರದಿದ್ದರೆ, ಗಮನ ಹರಿಸದಿದ್ದರೆ, ಅವಲೋಕಿಸದೆ ಇದ್ದರೆ, ವಿವೇಚನಾಯುಕ್ತವಾಗಿರದಿದ್ದರೆ ಮುಕ್ತಾಯಗೊಳ್ಳಬಾರದ ಕೆಲವು ವಿಷಯಗಳು (ಕೆಳ ಮುಖದತ್ತ ಇಂಗಿತ ಸೂಚನೆ ನೀಡುತ್ತಾರೆ) ಮುಕ್ತಾಯಗೊಳ್ಳುತ್ತವೆ. ಅದೇ ಅಡೆತಡೆಯನ್ನುಂಟು ಮಾಡುತ್ತದೆ. ಆ ಕಾರಣದಿಂದಾಗಿಯೇ ಈ ನಿಶ್ಚಿತತೆ ಮೇಲಿಂದ ಮೇಲೆ ಬರುತ್ತದೆ: ಟೀಕೆ ಮಾಡುವುದು ಬೇಡವೇಬೇಡ, ಏನಿರಬಾರದು ಎಂಬುವುದನ್ನು ನೋಡುವುದು ಬೇಡ – 'ಏನಾಗಬೇಕಾಗಿದೆ' ಎಂಬುದನ್ನು ಮಾತ್ರ ನೋಡುವಾ.

ಅದು ಜಯಿಸಬೇಕಾದ ಒಂದು ಶ್ರೇಷ್ಠ ವಿಜಯ.

(Vol. 4, p. 425)

**ಆಗಸ್ಟ 7, 1965**

ಈ ದಿನ ಬೆಳಿಗ್ಗೆ, ಓಹ್, ಕನಿಷ್ಠಪಕ್ಷ ಒಂದು ಗಂಟೆಯ ಕಾಲ ಒಂದು ಅನುಭವವಾಯಿತು. ಅದು ಭೌತಿಕ ಮನಸ್ಸಿನ ನಿಜವಾದ ಮನೋಭಾವ ಮತ್ತು ನಿಜವಾದ ಪಾತ್ರ ಕುರಿತಾಗಿತ್ತು. ಅದು ಯೋಚನೆಗೆ ಸಂಬಂಧಿಸಿರದೆ ಜೀವಿಸುವುದರ ಬಗ್ಗೆ ಇತ್ತು. ಜೀವಿಸಿದ್ದು. ಅದು ಸ್ವಾರಸ್ಯಕರವಾಗಿತ್ತು. ಒಂದು ಬಗೆಯ ಪ್ರಶಾಂತ ದಿವ್ಯಾನಂದದ್ದಾಗಿತ್ತು. ... ಅದು ಸತತ ಉಳಿದುಕೊಳ್ಳುವ ಸ್ಥಿತಿ ಮತ್ತು ಬಾಹ್ಯದಿಂದ ಬರುತ್ತಲೇ ಇರುವ ಮತ್ತು ಅಡ್ಡಿಪಡಿಸುವ (ಅಡ್ಡಿಪಡಿಸದೇ ಇರಬೇಕಾದಾಗ ಅಡ್ಡಿಪಡಿಸುವಂತಹದು) ಕ್ರಿಯೆ ಇವುಗಳ ನಡುವಿನ ಸಂಬಂಧ ಕುರಿತಾಗಿತ್ತು. ಉದಾಹರಣೆಗಳಿದ್ದವು. ಮೊದಲು ಬಂದದ್ದು ನಿನ್ನನ್ನು (ಸತ್ಪ್ರೇಮನನ್ನು) ಮತ್ತು ನಿನ್ನೊಡನಿರುವ (ಗುರು ಶಿಷ್ಯರ ನಡುವಿರುವ) ಸಂಬಂಧ ಕುರಿತಾಗಿತ್ತು, ಮತ್ತು ರೋಗಗ್ರಸ್ತ ಸ್ಥಿತಿಯಿಂದ ಹೊರಬರುವ ಮಾರ್ಗ ಕುರಿತಾಗಿತ್ತು. ಮತ್ತು ಪ್ರಜ್ಞೆಯ ಸಂಪೂರ್ಣ ಅರಳಿಕೊಳ್ಳುವಿಕೆ, ಸತ್ತೆಯ ಇಡೀ ಸಾಮರಸ್ಯ – ಇದೆಲ್ಲವನ್ನೂ ಕುರಿತು ಹಾಗೂ ಹೊಸ ಸಿದ್ಧಿ ಮಾಡಬಹುದಾದುದನ್ನು ಕುರಿತು ಇದ್ದಿತು.

ಒಂದು ಗಂಟೆಯ ಕಾಲ ಅದು ಉಳಿದುಕೊಂಡಿತ್ತು, ಅದು ಇಂದು ಬೆಳಗಿನ ಜಾವದಲ್ಲಿ 4.30 ರಿಂದ 5 ಗಂಟೆಯವರೆಗೆ ಇತ್ತು.

ಆದರೆ ಅದು ನಿಜವಾಗಿ ಸ್ವಾರಸ್ಯಕರವಾಗಿತ್ತು! ನಾನು ಅರ್ಥಮಾಡಿಕೊಂಡೆ. "ಜೀವನ ಸದಾ ಹೀಗಿರುತ್ತಿದ್ದರೆ, ಆಗ ನಾವು ಯಾವುದರ ಬಗೆಗೂ ದೂರು ಹೇಳುವುದಿಲ್ಲ" ಎಂದು ನಾನು ನನಗೇ ಹೇಳಿಕೊಂಡೆ.

ಎಲ್ಲ ಅವ್ಯವಸ್ಥೆಗಳನ್ನು, ಅವುಗಳ ಅಸಂತೋಷಕರ, ಒಪ್ಪಿಗೆಯಾಗದ ಪರಿಣಾಮಗಳನ್ನು ತೆಗೆದುಹಾಕಲಾಗಿತ್ತು (ಎಂದರೆ ಅವುಗಳ ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ ನೋವು ಮಾಯವಾಗಿತ್ತು), ಅಷ್ಟೇ ಅಲ್ಲದೆ ಅವು ಪ್ರಜ್ಞಾಪೂರ್ವಕವಾಗಿ ಸತ್ತೆಯ ಪ್ರಗತಿಯಲ್ಲಿ ಭಾಗವಹಿಸತೊಡಗಿದ್ದವು. ಆಗ ಅದು ಅತ್ಯುತ್ತಮವಾಗುತ್ತದೆ.

ನಾನು ಮಾತನಾಡಿದಾಗ ಅದು ಅನುಭವ ನಿಂತು ಹೋಗುವಂತೆ



ಮಾಡುತ್ತದೆ. ಅದು ಮರಳಿ ಬರುವುದಕ್ಕಾಗಿ ಕೆಲಕಾಲ ಕಾದುಕೊಂಡಿರಬೇಕಾಗುತ್ತದೆ – ಅದು ಎಂದಿಗೂ ಅದೇ ರೀತಿಯಲ್ಲಿ ಮರಳಿ ಬರುವುದಿಲ್ಲ. ಅದರರ್ಥ ಇಂದು ನನಗಾದ ಅನುಭವ ಇಂದೇ ಮುಕ್ತಾಯಗೊಳ್ಳುತ್ತದೆ. ನಾನು ಅದರ ಬಗ್ಗೆ ಮಾತನಾಡಿದ್ದರಿಂದ ಅದು ಅಲ್ಲಿಗೆ ಮುಗಿದು ಹೋಯಿತು. ಇನ್ನೂ ಹೆಚ್ಚು ಒಳ್ಳೆಯದಾದುರತ್ತ ನಾನು ಮುಂದೆ ಸಾಗಬೇಕು. ನೀವು ಮಾತನಾಡದಿದ್ದರೆ ಆ ಅನುಭವವನ್ನು ಕೆಲಕಾಲ, ಅದರ ಪರಿಣಾಮ ನಂದಿ ಹೋಗುವವರೆಗೆ, ಕಾದಿಟ್ಟುಕೊಳ್ಳಬಹುದು. ನೀವು ಮಾತನಾಡಿದಾಗ ಅದು ಮುಗಿದು ಹೋಗುತ್ತದೆ, ಭೂತಕಾಲಕ್ಕೆ ಸೇರಿಬಿಡುತ್ತದೆ. ನೀವು ಹೊಸದಾದ ಏನೋ ಒಂದರತ್ತ ಸಾಗಿ ಹೋಗಬೇಕು.

ಯಾವಾಗಲೂ ಏನೋ ಒಂದು ನನ್ನನ್ನು ಹೊಸದಾದುದರತ್ತ ಮುಂದೂಡುತ್ತಿರುತ್ತದೆ. – ಒಂದು ಹೆಚ್ಚಿನ ಹೆಜ್ಜೆ ಇರಿಸಬೇಕಾಗುತ್ತದೆ. ಅದು ಒಳ್ಳೆಯದು.

**ಸತ್ಪ್ರೇಮ :** *ಆದರೆ ಅದು ಏನನ್ನು ಕುರಿತಾಗಿತ್ತು? ಭೌತಿಕ ಮನಸ್ಸಿನ ಕ್ರಿಯೆಯನ್ನು ಕುರಿತಾಗಿತ್ತೆ?*

**ಶ್ರೀಮಾತೆ :** ಅದೊಂದು ಮನೋಭಾವ.

**ಸತ್ಪ್ರೇಮ :** *ಭೌತಿಕ ಮನಸ್ಸಿನ ಮನೋಭಾವವೆ?*

**ಶ್ರೀಮಾತೆ :** ಒಂದು ಮನೋಭಾವ, ಆದರೆ ಓಹ್ ... ಸಂಕಲ್ಪಿಸಿದ್ದಲ್ಲ ಇಲ್ಲವೆ ಯೋಜಿಸಿದ್ದಲ್ಲ, ಅಂತಹದೇನೂ ಅಲ್ಲವೇ ಅಲ್ಲ. ಸರಳ ರೀತಿಯಲ್ಲಿ ಅದು ಅರ್ಥಮಾಡಿಕೊಂಡಿತ್ತು.

ಅದು ಮೌನದಿಂದಿದ್ದು ಕಾರ್ಯ ಕೈಕೊಳ್ಳುವುದನ್ನು ಕಲಿತುಕೊಂಡಿತ್ತು.

ಮೌನದಿಂದಿರುವುದು, ಕಾರ್ಯಕೈಕೊಳ್ಳುವುದು.

ಓ, ಅದು ಬಹಳ ಸುಂದರವಾಗಿತ್ತು.

(ಮೌನ)

ನಾನು ಅದನ್ನು ಅಭಿವ್ಯಕ್ತಪಡಿಸಿದ ಪ್ರತಿಸಲ ಅದು ಭೂತಕಾಲಕ್ಕೆ ಹಿಂದೆ ಸರಿದು ಹೋಗುತ್ತದೆ. (ಶ್ರೀಮಾತೆಯವರು ಸತ್ಪ್ರೇಮನತ್ತ ನೋಡುತ್ತಾರೆ) ನೀನು ಪ್ರಶ್ನೆಯೊಂದನ್ನು ಕೇಳುವುದಿದೆಯೆ? ಇದ್ದರೆ ಕೇಳಬಹುದು.

**ಸತ್ಪ್ರೇಮ :** ಇಲ್ಲ, ನಾನು ಕೇಳಬೇಕಾದ ಪ್ರಶ್ನೆಯಿಲ್ಲ. ನೀವು ಹೇಳುತ್ತಿರುವುದರಲ್ಲಿ ನಾನು ಮಗ್ನನಾಗಿ ಹೋಗಿದ್ದೆ.

**ಶ್ರೀಮಾತೆ :** ಅದು ದೀರ್ಘ ವಕ್ರ ಮಾರ್ಗವನ್ನು ಅನುಸರಿಸಿತ್ತು. ... ಭೌತಿಕ ಮನಸ್ಸಿನ ರೂಢಿಗತ ಚಟುವಟಿಕೆಗಾಗಿ ಆಳವಾದ ಜುಗುಪ್ಸೆಯಿಂದ ಅದು ಪ್ರಾರಂಭವಾಯಿತು. ನಾನು ಹಿಡಿದುಕೊಳ್ಳಲು (ಈಗಲ್ಲ, ಹಲವಾರು ವಾರಗಳಿಂದ ಅದು ನಡೆಯುತ್ತ ಬಂದಿದೆ) ಪ್ರಾರಂಭಿಸಿದೆ, ಅದರ ಎಲ್ಲ ನಿತ್ಯಗಟ್ಟಲೆ ಮತ್ತು ಬಹುಮಟ್ಟಿಗೆ ಸ್ವಯಂಚಾಲಿತ ಚಟುವಟಿಕೆಗಳನ್ನು ಹಿಡಿದುಕೊಳ್ಳುತ್ತಿದ್ದೆ. ನಾನದನ್ನು ಹಲವಾರು ಸಲ ಹೇಳಿದ್ದೇನೆ: ಈ ಭೌತಿಕ ಮನಸ್ಸು ಸೋಲಿನ ಮನೋಭಾವದ್ದು, ಯಾವಾಗಲೂ ನಿರಾಶಾಜನಕವಾದದ್ದು, ಅಧಿಕಪ್ರಸಂಗದ್ದು, ಆಕ್ಷೇಪಿಸುವಂತಹದು, ಅಸಂತುಷ್ಟವಾದದ್ದು, ನಂಬಿಕೆ ಹಾಗೂ ವಿಶ್ವಾಸಗಳ ಕೊರತೆಯುಳ್ಳದ್ದು ಆಗಿರುತ್ತದೆ. ... ಅದು ಸಂತುಷ್ಟವಾಗಿರುವತ್ತ, ತೃಪ್ತಿಹೊಂದಿರುವತ್ತ ಪ್ರವೃತ್ತಿ ಹೊಂದಿದಾಗಲೂ ಕೂಡ ಏನೋ ಒಂದು ಬಂದು "ಅಹಾ, ಅದನ್ನು ನಿಲ್ಲಿಸಿಬಿಡು, ಏಕೆಂದರೆ ನಿನಗೆ ಇನ್ನೊಂದು ಹೊಡೆತ ಬರಲಿದೆ" ಎಂದು ಹೇಳುತ್ತದೆ. ವಿಷಯ ಆ ಬಗೆಯದು. ಅಂತಹದು ಹಲವಾರು ವಾರಗಳವರೆಗೆ ನಡೆದು ಹೋಗುತ್ತಿತ್ತು, ಕಾರ್ಯ ಸತತ ನಡೆಯುತ್ತಿತ್ತು. ಅದು ಯಾವಾಗಲೂ ಅರ್ಪಣೆ ಮಾಡುವುದರಲ್ಲಿ ಕೊನೆಗೊಳ್ಳುತ್ತಿತ್ತು. ಪ್ರಗತಿಯ ಪ್ರಾರಂಭ ಅಲ್ಲಿತ್ತು. ... ಇಲ್ಲ, ಅದಕ್ಕಿಂತ ಮೊದಲು ಏನು ಸಂಭವಿಸಿತೆಂಬುದನ್ನು ನಾನು ಮೊದಲು ಹೇಳಬೇಕು. ಪ್ರಾರಂಭದ ದೆಶೆಯಲ್ಲಿ ಉದಾಹರಣೆಗೆ ಜಪ, ಮಂತ್ರ ಇವುಗಳನ್ನು ಶಿಸ್ತುಪಾಲನೆಯ ರೂಪದಲ್ಲಿ ಕೈಗೆತ್ತಿಕೊಳ್ಳಲಾಗಿತ್ತು, ನಂತರ ಅದು ಶಿಸ್ತುಪಾಲನೆಯ ಸ್ಥಿತಿಯಿಂದ ಸಮಾಧಾನ ನೀಡುವ ಸ್ಥಿತಿಗೆ ಬದಲಾಯಿತು (ಆದರೆ ಅದಿನ್ನೂ ಒಂದು ಕರ್ತವ್ಯ ಎಂಬ ಭಾವನೆ ಇದ್ದಿತು.) ನಂತರ ಆ ಸ್ಥಿತಿಯಿಂದ ಅದು ಒಂದು ರೀತಿಯಲ್ಲಿ ಸತತ ಉಳಿದುಕೊಳ್ಳುವ ಸಮಾಧಾನದ ಸ್ಥಿತಿಯಾಗಿ ಬದಲಾಯಿತು, ಅದರೊಂದಿಗೆ ಅದು ಮೇಲಿಂದ ಮೇಲೆ ಬರಲಿ, ಹೆಚ್ಚು ಸತತವಾಗಿ ಉಳಿದುಕೊಳ್ಳಲಿ ಮತ್ತು ಹೆಚ್ಚು ಪ್ರತ್ಯೇಕವಾದದ್ದಾಗಿರಲಿ ಎಂಬ ಬಯಕೆ (ಬಯಕೆಯಲ್ಲ, ಆದರೆ ಸಂಕಲ್ಪ ಇಲ್ಲವೆ ಅಭೀಪ್ಸೆ) ಇದ್ದಿತು. ನಂತರ ಕಾರ್ಯದತ್ತ, ಜನರತ್ತ ಇತ್ಯಾದಿ ಕರ್ತವ್ಯವಿರುವ ಭಾವನೆಯಿಂದ ಮತ್ತು ಅವ್ಯವಸ್ಥೆ, ಗೊಂದಲಗಳಿಂದ ಮಿಶ್ರಣಗೊಂಡು ಬರುತ್ತಿದ್ದ ಒಂದು ಬಗೆಯ ಜುಗುಪ್ಸೆ ಹಾಗೂ ಕ್ಷೋಭೆಗೊಳಿಸುವುದೆಲ್ಲದರ ಬಗ್ಗೆ ತಿರಸ್ಕಾರ ಉಂಟಾಗುತ್ತಿತ್ತು. ಅದು ಅಭಿವೃದ್ಧಿಯ ದೀರ್ಘ ಕಾರ್ಯವಿಧಾನವಾಗಿತ್ತು.



ಮುಡಿಪಾಗಿರಿಸುವಿಕೆಯ ಮತ್ತು ಸರ್ವೋಚ್ಚ ದೈವೀಸಂಕಲ್ಪಕ್ಕೆ ವಿಧೇಯತೆಯಿಂದಿರುವ ಪರಿಣಾಮವೆಂದಾಗಿ ಸಹಿಸಿಕೊಂಡಿದ್ದ ಚಟುವಟಿಕೆಗಳತ್ತ ಇತ್ತೀಚೆಗೆ ಸಮತೆಗಾಗಿ ಒಂದು ಬಗೆಯ ಸಂಕಲ್ಪವಿತ್ತು. ಆಗ ಸ್ವಾತಂತ್ರ್ಯದ ಭಾವನೆ ಮತ್ತು ಸ್ಥಿತಿಯ ಸ್ವಯಂಪ್ರೇರಣೆ ಮತ್ತು ಕಾರ್ಯಕೈಕೊಳ್ಳಬೇಕಾದಾಗ ಇರಬೇಕಾದ ಮನೋಭಾವದ ಬಗೆಗಿನ ತಿಳಿವಳಿಕೆಯ ಪ್ರಾರಂಭ ಇವೆಲ್ಲವುಗಳ ಭಾವನೆಯೊಂದಿಗೆ, ಒಮ್ಮೆಗೆ ಆ ಚಟುವಟಿಕೆಗಳು ಧನಾತ್ಮಕವಾದ ಏನೋ ಒಂದು ಆದವು. ಇವೆಲ್ಲವೂ ಬಹಳ ಪ್ರಗತಿಪರ ರೀತಿಯಲ್ಲಿ ಬಂದವು. ಮತ್ತು ಇಂದು ಬೆಳಿಗ್ಗೆ ಆ ಅನುಭವವಾಯಿತು.

(ಮೌನ)

ನಾನದನ್ನು ಈ ರೀತಿ ಅಭಿವ್ಯಕ್ತಗೊಳಿಸಬಹುದು; ನಿಶ್ಚಲನೀರವತೆಯಲ್ಲಿ ಇದ್ದುಕೊಂಡುಬಿಡುವುದಕ್ಕೆ ಮತ್ತು ಮೇಲಿನಿಂದ ದೈವೀ ಪ್ರಚೋದನೆ ಬಂದಾಗ ಮಧ್ಯಸ್ಥಿಕೆ ವಹಿಸುವುದಕ್ಕೆ ಕ್ಷಮತೆಯನ್ನು ಹೊಂದಿರುವುದಾಗಿದೆ.

ಪರಮೋಚ್ಚ ದೈವೀ ವಿವೇಕದಿಂದ ಚಾಲನೆಗೊಳಗಾದಾಗ ಮಾತ್ರ ಕೈಕೊಳ್ಳಬೇಕಾದ ಪ್ರತಿಯೊಂದು ಕಾರ್ಯದಲ್ಲಿ ಮಧ್ಯಸ್ಥಿಕೆ ವಹಿಸುವುದಿರುತ್ತದೆ.

ಮತ್ತು ಅದು ಈ ಭೌತಿಕ ಮನಸ್ಸಿನ ಉದ್ದೇಶದ ನಿಖರವಾದ ಅರ್ಥ ಕೊಟ್ಟಿತು, ಏಕೆಂದರೆ ಅಲ್ಲಿ, ಯಾವಾಗಲೂ, ಹಿನ್ನೆಲೆಯಲ್ಲಿ ಶ್ರೀ ಅರವಿಂದರ ವಾಕ್ಯವಿತ್ತು, "ಭೌತಿಕ ಮನಸ್ಸು ಅಸಾಧ್ಯವಾದ ಉಪಕರಣ, ಬಹುಶಃ ಅದನ್ನು ತೊಡೆದು ಹಾಕಬೇಕಾಗುವುದು" ಎಂದು ಅವರು ಆ ವಾಕ್ಯದಲ್ಲಿ ಹೇಳಿದ್ದರು. ಅದು ಉಳಿದುಕೊಂಡಿತ್ತು. ನಾನು ಏನೋ ತಪ್ಪಾಗಿದೆ ಎಂಬುದನ್ನು ನೋಡಿದ್ದೆ: ಎಲ್ಲ ರೀತಿಯ ಟೀಕೆಗೆ ಒಳಗಾಗಿದ್ದಾಗ್ಯೂ, ಅರ್ಪಣ ಮಾಡಿದಾಗ್ಯೂ, ಎಲ್ಲ ಜುಗುಪ್ಸೆ, ತಿರಸ್ಕಾರಗಳಿದ್ದಾಗ್ಯೂ ಭೌತಿಕ ಮನಸ್ಸನ್ನು ರಕ್ಷಿಸಲಾಗಿತ್ತು. ಕೇವಲ ಅದನ್ನು ನಿಧಾನ ಗತಿಯಲ್ಲಿ ಪರಿವರ್ತನೆಗೆ ಒಳಪಡಿಸಲಾಗಿದೆ ಮತ್ತು ಈಗ ಮೊದಲ ಹೆಜ್ಜೆಯನ್ನಿರಿಸಲಾಗಿದೆ, ಅದರ (ಭೌತಿಕ ಮನಸ್ಸಿನ) ಸ್ವಯಂಚಾಲಿತ ಚಟುವಟಿಕೆ ತಾತ್ಕಾಲಿಕ ನಿಲುಗಡೆಗೆ ಒಳಗಾಗುತ್ತಿರುವ ಅನುಭವದಿಂದಾಗಿ ಆ ಹೆಜ್ಜೆ ಪರಿವರ್ತನೆಯ ಮಾರ್ಗದ ಮೇಲಿದೆ.

ಅದು ಇಂದು ಮುಂಜಾವಿನ ಸಮಯದಲ್ಲಾದ ಅನುಭವವಾಗಿತ್ತು. ಅದು ಕೊನೆಯದೆಂದು ನಾನು ಹೇಳುತ್ತಿಲ್ಲ, ಕೊನೆಯದು ಅದರಿಂದ ಇನ್ನೂ ಬಹಳ

ದೂರದಲ್ಲಿದೆ, ಆದರೆ ಅದು ಹೆಚ್ಚಿನ ಮಟ್ಟದ ನಿಯಂತ್ರಣದಲ್ಲಿದೆ. ನಿಂತು–ಹೋಗುವಿಕೆ ಬಹುಶಃ ಒಂದೆರಡು ಗಂಟೆಗಳ ಕಾಲ ಉಳಿದುಕೊಂಡಿರಬಹುದು, ನನಗೆ ಅದರ ನೆನಪು ಬರುತ್ತಿಲ್ಲ. ಆದರೆ ಅದರ ಚಟುವಟಿಕೆ, ಇನ್ನು ಮುಂದೆ, ಅಷ್ಟೊಂದು ಯಾಂತ್ರಿಕವಾಗಿರುವುದಿಲ್ಲ. ಮಾನಸಿಕ ನಿಶ್ಚಲ ನೀರವತೆಯಂತಹದರ ಬಗೆಗೆ ನಿಮಗೆ ತಿಳಿದಿದೆ, ಅದರಲ್ಲಿ ಪ್ರತಿಯೊಂದು ಅಡ್ಡಬಿದ್ದು ತನ್ನನ್ನು ಕಳೆದುಕೊಂಡ (falls flat) (ನಿಶ್ಚಲತೆಯ, ಸಮಪಾತಳಿಯಲ್ಲಿರುವುದರ ಸಂಕೇತವನ್ನು ಶ್ರೀಮಾತೆಯವರು ಮಾಡುತ್ತಾರೆ) ರೀತಿಯಲ್ಲಿದೆ. ಸರಿ, ಅಂತಹದನ್ನು ನಾವು ಈಗ ಈ ಭೌತಿಕ ಮನಸ್ಸಿನೊಂದಿಗೆ ಮಾಡಬಹುದು – ಅದು ಮೇಲ್ಮುಖವಾಗಿ ಅಡ್ಡಬಿದ್ದು ತನ್ನನ್ನು ಕಳೆದುಕೊಂಡಂತಿರುತ್ತದೆ.

ಆದರೆ ಅದು ಪ್ರಾರಂಭ, ಕೇವಲ ಪ್ರಾರಂಭ.

ಅಲ್ಲಿ ನಿಶ್ಚಿತತೆ ಮಾತ್ರ ಇದೆ. ಅದು ಕೆಲವೇ ನಿಮಿಷಗಳ ಕಾಲ ನಡೆದು ಹೋಗಿದ್ದರೂ, ಅದು ಇರಲಿದೆ ಎಂಬುದರ ಬಗ್ಗೆ ಮನುಷ್ಯ ನಿಶ್ಚಿತತೆ ಹೊಂದಿರಬಲ್ಲ – ಅದು ಕೆಲವು ನಿಮಿಷಗಳಿಗಿಂತಲೂ ಹೆಚ್ಚಿನ ಕಾಲ ನಡೆಯಿತು, ಪರಿಣಾಮವಾಗಿ ಈ ಭೌತಿಕ ಮನಸ್ಸು ಪರಿವರ್ತನೆಗೊಳಗಾಗಲಿರುವುದರ ಭಾಗವಾಗುತ್ತದೆ.

ಮತ್ತು ಅದು ಮಹೋನ್ನತ ಸಾಮರ್ಥ್ಯವನ್ನು ಕೊಡುತ್ತದೆ! ಅದು ನಿಂತು ಹೋದಾಗ ದೈವೀಪ್ರೇಮದ ಕಂಪನ ಅದರ ಸಮಗ್ರತೆಯಲ್ಲಿ ಪ್ರಕಟವಾಗಬಲ್ಲದು.

ಅದು ವೈಭವದಿಂದ ಕೂಡಿಕೊಂಡು ಇಂದು ಮುಂಜಾನೆ ಬಂದಿತು.

ಅದು ನಂತರ ಕೈಗೆತ್ತಿಕೊಳ್ಳಬೇಕಾದ ವಿಷಯ.

(Vol. 6, p. 207)

**ಜನವರಿ 21, 1967**

ಹೆಚ್ಚಾಗಿ ಇನ್ನೂ ವಿವರಿಸಲಾಗದ ಏನೋ ಒಂದು ಸಂಭವಿಸುತ್ತಿದೆ.

ದೇಹ ತನ್ನ ಕಾರ್ಯವಿಧಾನಗಳನ್ನು ಸ್ವಯಂಚಾಲಿತವಾಗಿ, ಸ್ವಾಭಾವಿಕವಾದ ಏನೋ ಎಂಬಂತೆ ನೆರವೇರಿಸುವ ರೂಢಿಯನ್ನು ಹೊಂದಿತ್ತು, ಅದರರ್ಥ ಅದಕ್ಕೆ ಅವುಗಳ ಮಹತ್ವ ಇಲ್ಲವೆ ಉಪಯುಕ್ತತೆ ಕುರಿತು ಪ್ರಶ್ನೆ ಉದ್ಭವಿಸಲಿಲ್ಲ, ಉದಾಹರಣೆಗೆ ವಿಷಯಗಳನ್ನು ಕುರಿತು ಯಾವುದು ಮಹತ್ವದ್ದಾದದ್ದು, ಯಾವುದು ಸ್ವಾರಸ್ಯಕರವಾದದ್ದು, ಯಾವುದು ಅಂತಹದಲ್ಲ ಎಂಬುದರ ಬಗೆಗೆ ಮಾನಸಿಕ



ಇಲ್ಲವೆ ಪ್ರಾಣಿಕ ದೃಷ್ಟಿ ಇರಲಿಲ್ಲ. ಆ ದೃಷ್ಟಿ ಅಸ್ತಿತ್ವದಲ್ಲಿರಲಿಲ್ಲ. ಆದರೆ ಈ ಜೀವಕೋಶಗಳು ಪ್ರಜ್ಞಾವಂತವಾಗುತ್ತಿವೆ, ಅವು ಹಿಂದೆ ಸರಿದು ನಿಂತುಕೊಂಡಿರುವಂತೆ ತೋರಿಬರುತ್ತಿದೆ (ಹಿಂದೆ ಸರಿಯುವುದರ ಸೂಚನೆಯನ್ನು ಶ್ರೀಮಾತೆಯವರು ಮಾಡುತ್ತಾರೆ), ಅವು ತಮ್ಮತ್ತ ನೋಡುತ್ತವೆ, ಅವು ಕ್ರಿಯೆ ಕೈಕೊಳ್ಳುವುದರತ್ತ ಗಮನ ಹರಿಸಲು ಪ್ರಾರಂಭಿಸುತ್ತವೆ ಮತ್ತು "ಇದೆಲ್ಲದರ ಪ್ರಯೋಜನವೇನು?" ಎಂದು ಅವು ಬಹಳ ಆಶ್ಚರ್ಯಪಡುತ್ತವೆ. ಮತ್ತು ನಂತರ "ವಿಷಯಗಳು ನಿಜವಾಗಿ ಹೇಗಿರಬೇಕು? ನಮ್ಮ ಉದ್ದೇಶ, ಉಪಯುಕ್ತತೆ, ಆಧಾರಗಳೇನು? ಹೌದು, ನಮ್ಮ ಜೀವನದ ಆಧಾರ, ಮಾನದಂಡ ಏನಿರಬೇಕು?" ಎಂಬ ಅಭೀಪ್ಸೆ ಅವುಗಳಲ್ಲಿರುತ್ತದೆ. ಅದನ್ನು ಮತ್ತೆ ಮಾನಸಿಕ ರೀತಿಯಲ್ಲಿ ಹೇಳುವುದಾದರೆ "ನಾವು ದೈವಿಕವಾದ ಮೇಲೆ ಹೇಗಿರುವೆವು? ವ್ಯತ್ಯಾಸವೇನಿರುತ್ತದೆ? ದೈವಿಕವಾಗಿ ಇರುವ ರೀತಿಯೇನು?" ಎಂದು ನಾವು ಹೇಳಬಹುದು. ಮತ್ತು ಅಲ್ಲಿ ಮಾತನಾಡುತ್ತಿರುವುದು ಭೌತಿಕ ರೀತಿಯ ಆಧಾರ, ಇಡಿಯಾಗಿ ಸಾವಿರಾರು ಚಿಕ್ಕ ವಸ್ತುಗಳಿಂದ ಕೂಡಿಕೊಂಡದ್ದು, ಆ ವಸ್ತುಗಳು ತಮ್ಮ ಬಗ್ಗೆ ಸಂಪೂರ್ಣವಾಗಿ ಉದಾಸೀನ ಭಾವವನ್ನು ಹೊಂದಿರುವಂತಹವು. ಅವುಗಳ ಅಸ್ತಿತ್ವದ ಉದ್ದೇಶ, ಇನ್ನೊಂದು ಕ್ರಿಯೆಗೆ ಆಧಾರವೆಂದಾಗಿ, ಇಡಿಯಾಗಿ ಇರುವುದರಲ್ಲಿದೆ, ಆದರೆ ಅವು ತಮ್ಮಲ್ಲಿಯೇ ಸ್ವತಃ ಯಾವ ಅರ್ಥವನ್ನೂ ಹೊಂದಿಲ್ಲ. ಮತ್ತು ನಂತರ ಮತ್ತೆ ಅದೇ ವಿಷಯ: ಒಂದು ಬಗೆಯಲ್ಲಿ ಸ್ವೀಕರಿಸುವಿಕೆ, ತನ್ನೊಳಗೆ ಒಳನುಗ್ಗಲು ಅನುವು ಮಾಡಿಕೊಡಲು ಮೌನವಾಗಿ ತೆರೆದಿರಿಸಿಕೊಳ್ಳುವಿಕೆ ಮತ್ತು ಪ್ರಕಾಶಮಯವಾಗಿ, ಸಾಮರಸ್ಯದಿಂದ ಇರಬಹುದಾದ ಸತ್ತೆಯ ರೀತಿಯನ್ನು ಸೂಕ್ಷ್ಮವಾಗಿ ಗ್ರಹಿಸುವಿಕೆ.

ಆ ರೀತಿ ಇರುವುದನ್ನು ಕುರಿತು ವಿವರಣೆ ಕೊಡುವುದು ಇನ್ನೂ ಸಾಧ್ಯವಾಗಿಲ್ಲ, ಆದರೆ ಈ ಅರಸುವಿಕೆಯಲ್ಲಿ ಸತತ ಗ್ರಹಿಕೆಯೊಂದಿರುತ್ತದೆ (ಅದು ದರ್ಶನವಾಗಿ ಇನ್ನೊಂದು ರೂಪ ಪಡೆಯುತ್ತದೆ.) ಆ ದರ್ಶನದಲ್ಲಿ ಹಲವಾರು ವರ್ಣಗಳಿರುತ್ತವೆ ಎಂದರೆ ಎಲ್ಲ ಬಣ್ಣಗಳಿರುತ್ತವೆ, ಆ ಬಣ್ಣಗಳು ಪದರುಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ, ಆದರೆ ಚುಕ್ಕೆಗಳಲ್ಲಿ ಸಂಯೋಜಿತವಾಗಿರುವ ಹಾಗಿರುತ್ತವೆ, ಅಲ್ಲಿ ಎಲ್ಲ ಬಣ್ಣಗಳ ಸಂಯೋಜನೆ ಇರುತ್ತದೆ. ಎರಡು ವರ್ಷಗಳ ಹಿಂದೆ (ಎರಡು ವರ್ಷಗಳಿಗಿಂತಲೂ ಸ್ವಲ್ಪ ಹಿಂದೆ) ನಾನು ತಾಂತ್ರಿಕರನ್ನು ಭೇಟಿ ಮಾಡಿದಾಗ ಮತ್ತು ಅವರ ಸಂಪರ್ಕದಲ್ಲಿ ಬಂದಾಗ ಆ ಪ್ರಕಾಶವನ್ನು ನೋಡಲು ಪ್ರಾರಂಭಿಸಿದೆ. ಅದು 'ತಾಂತ್ರಿಕರ ಪ್ರಕಾಶ' ತಾಂತ್ರಿಕರು ಭೌತಿಕ ಜಗತ್ತನ್ನು ನೋಡುವ ರೀತಿಯದು

ಇರಬಹುದೆಂದು ಯೋಚಿಸಿದೆ. ಆದರೆ ಈಗ ಅದು ಪ್ರತಿಯೊಂದರ ಜೊತೆಗೆ ಸತತ ಕೂಡಿಕೊಂಡಿರುವುದನ್ನು ನೋಡುತ್ತಿದ್ದೇನೆ. ಮತ್ತು ಅದು "ನಿಜವಾದ ಭೌತದ್ರವ್ಯದ ಬಗೆಗಿನ ಗ್ರಹಿಕೆ" ಎಂದು ನಾವು ಕರೆಯಬಹುದಾದದ್ದು ಎಂದು ತೋರಿಬರುತ್ತಿದೆ. (ಶ್ರೀಮಾತೆಯವರು ಚುಕ್ಕೆಗಳಾಗುವಂತೆ ಮಾಡುವ ಸಂಜ್ಞೆ ಮಾಡುತ್ತಾರೆ) ಸಾಧ್ಯವಿರಬಹುದಾದ ಎಲ್ಲ ಬಣ್ಣಗಳನ್ನು ಒಂದರೊಳಗೊಂದು ಮಿಶ್ರಣಗೊಳ್ಳದಂತೆ ಮತ್ತು ಪ್ರಕಾಶಮಯ ಚುಕ್ಕೆಗಳಲ್ಲಿ ಸಂಯೋಜಿಸಲಾಗಿದೆ. ಪ್ರತಿಯೊಂದನ್ನೂ ಇದರಿಂದ ಮಾಡಿದ ಹಾಗಿದೆ. ಅದು ಅಸ್ತಿತ್ವದಲ್ಲಿರುವ ನಿಜವಾದ ರೀತಿ ಇರಬಹುದು ಎಂದು ತೋರಿಬರುತ್ತಿದೆ. ನನಗಿನ್ನೂ ಖಚಿತವಾಗಿಲ್ಲ, ಏನೇ ಇರಲಿ, ಅದು ಬಹಳ ಹೆಚ್ಚಿನ ರೀತಿಯಲ್ಲಿ ಪ್ರಜ್ಞಾವಂತವಾಗಿ ಇರುವ ರೀತಿಯಾಗಿದೆ.

ನಾನದನ್ನು ತೆರೆದ ಕಣ್ಣುಗಳಿಂದ, ಕಣ್ಣು ಮುಚ್ಚಿಕೊಂಡು ಎಲ್ಲ ಸಮಯದಲ್ಲಿ ನೋಡುತ್ತೇನೆ, ಅದು (ದೇಹವನ್ನು ಕುರಿತು) ವಿಚಿತ್ರ ಗ್ರಹಿಕೆಯನ್ನು ಕೊಡುತ್ತದೆ, ಆ ಗ್ರಹಿಕೆ ಅದೇ ಕಾಲಕ್ಕೆ ಸೂಕ್ಷ್ಮತೆಯ, ವ್ಯಾಪ್ಯತೆ(permeability)ಯ (ಅದನ್ನು ನಾನು ಹಾಗೆ ಕರೆಯಬಹುದಾದರೆ), ರೂಪದ ನಮ್ಯತೆಯ ಗ್ರಹಿಕೆಯಾಗಿರುತ್ತದೆ. ರೂಪಗಳಲ್ಲಿ ಬಿರುಸಾಗಿರುವುದನ್ನು ಸಾಕಷ್ಟು ಕಡಿಮೆ ಮಾಡಲಾಗಿರುತ್ತದೆ, ಆದರೆ ಅದನ್ನು ನಿಖರವಾಗಿ ತೆಗೆದು ಹಾಕಿರುವುದಿಲ್ಲ (ಬಿರುಸಾಗಿರುವುದನ್ನು ತೆಗೆದು ಹಾಕಲಾಗಿರುತ್ತದೆ, ಆದರೆ ರೂಪಗಳನ್ನಲ್ಲ: ರೂಪಗಳಲ್ಲಿ ನಮ್ಯತೆಯಿರುತ್ತದೆ). ದೇಹವನ್ನು ಕುರಿತು ಹೇಳುವುದಾದರೆ, ಮೊಟ್ಟಮೊದಲಿನ ಸಮಯಗಳಲ್ಲಿ ಅದು ಸಂಭವಿಸಿದಾಗ ಅದರ ಒಂದು ಇಲ್ಲವೆ ಇನ್ನೊಂದು ಭಾಗ ಒಂದಿಷ್ಟೇನನ್ನೋ ಕಳೆದುಕೊಂಡ, ಏನೋ ಒಂದು ಉಪಾಯವಾಗಿ ತಪ್ಪಿಸಿಕೊಳ್ಳುತ್ತಿರುವ ಭಾವನೆ ತಂದುಕೊಂಡಿತು. ಆದರೆ ಮನುಷ್ಯ ಬಹಳ ಅಚಂಚಲವಾಗಿ ಉಳಿದುಕೊಂಡರೆ ಮತ್ತು ಅಚಂಚಲವಾಗಿದ್ದುಕೊಂಡು ಕಾದುಕೊಂಡಿದ್ದರೆ ಅದರ ಸ್ಥಾನದಲ್ಲಿ ಒಂದು ಬಗೆಯ ನಮ್ಯತೆ ಮತ್ತು ಸ್ರಾವತೆ(fluidity) ಬರುತ್ತವೆ, ಅದು ಜೀವಕೋಶಗಳ ಹೊಸಬಗೆಯ ಕ್ರಮವಾಗಿರುತ್ತದೆ.

ಬಹುಶಃ ಭೌತಿಕ ಸ್ತರದಲ್ಲಿ, ಅಹಂಕಾರದ ಸ್ಥಾನದಲ್ಲಿ ಅದು ಇರುವುದಾಗಿರಬಹುದು, ಎಂದರೆ ರೂಪದ ಬಿರುಸು ತನ್ನ ಸ್ಥಾನವನ್ನು ಹೊಸ ರೀತಿಯಲ್ಲಿ ಇರುವುದಕ್ಕೆ ಬಿಟ್ಟುಕೊಡಬೇಕಾಗುವುದು. ಸಹಜವಾಗಿ ಮೊದಲ ಸಂಪರ್ಕ, ಯಾವಾಗಲೂ, ಬಹಳ ಆಶ್ಚರ್ಯಜನಕವಾಗಿರುತ್ತದೆ. ಆದರೆ ದೇಹ ಅದನ್ನು ಸ್ವಲ್ಪ, ಸ್ವಲ್ಪವಾಗಿ ರೂಢಿಸಿಕೊಳ್ಳುತ್ತಲಿದೆ. ಒಂದು ರೀತಿಯಿಂದ ಇನ್ನೊಂದಕ್ಕೆ



ಆಗುವ ಸಂಕ್ರಮಣ ಸ್ವಲ್ಪ ಕಠಿಣವಾದದ್ದಾಗಿರುತ್ತದೆ. ಅದನ್ನು ಬಹಳ ಪ್ರಗತಿಪರ ರೀತಿಯಲ್ಲಿ ಕೈಕೊಳ್ಳಲಾಗುತ್ತದೆ. ಆದಾಗ್ಯೂ ಸಂಕ್ರಮಣವಾಗುತ್ತಿರುವ ಕ್ಷಣದಲ್ಲಿ ಕೆಲವು ಸೆಕೆಂಡುಗಳ ಕಾಲವಿರುತ್ತದೆ... ಅದನ್ನು ಕುರಿತು ಆವು, ಕನಿಷ್ಠಪಕ್ಷ, 'ಅನಿರೀಕ್ಷಿತವಾದವುಗಳು' ಎಂದು ಹೇಳಬಹುದು.

ಆ ರೀತಿಯಲ್ಲಿ ಎಲ್ಲ ರೂಢಿಗಳನ್ನು ತೆಗೆದುಹಾಕಲಾಗುತ್ತದೆ. ರಕ್ತಸಂಚಲನ, ಜೀರ್ಣಿಸುವಿಕೆ, ಉಸಿರಾಡಿಸುವಿಕೆ. ಹೀಗೆ ಎಲ್ಲ ಕಾರ್ಯಗತಿಗಳಿಗೂ ಅದೇ ಅನ್ವಯಿಸುತ್ತದೆ. ಸಂಕ್ರಮಣ ಕಾಲದಲ್ಲಿ ಒಂದು ಇನ್ನೊಂದರ ಸ್ಥಾನದಲ್ಲಿ ಒಮ್ಮಿಂದೊಮ್ಮೆಗೆ ಬರುತ್ತದೆಂದಲ್ಲ, ಆದರೆ ಅವೆರಡರ ನಡುವೆ ಪ್ರವಹಿಸಿ ಹೋಗುವ (fluidity) ಸ್ಥಿತಿಯಿರುತ್ತದೆ, ಅದು ಕಠಿಣವಾಗಿರುತ್ತದೆ. ಪರಮೋಚ್ಚ ಪ್ರಭುವಿನಲ್ಲಿ – ಪರಮೋಚ್ಚನ ಏಕೈಕ ನಿಜವಾದ ಅಸ್ತಿತ್ವದಲ್ಲಿ ಶ್ರೇಷ್ಠ ಮಟ್ಟದ ನಂಬಿಕೆ ಎಂದರೆ ಪರಿಪೂರ್ಣ, ನಿಶ್ಚಲ, ಪ್ರಕಾಶಮಯ, ಸತತ ಇರುವ, ಬದಲಾವಣೆಗೆ ಒಳಗಾಗದ ನಂಬಿಕೆ ಇರುವುದರಿಂದ ಪ್ರತಿಯೊಂದು, ಅದಿರುವ ಹಾಗೆ ಕಣ್ಣಿಗೆ ಕಾಣುವಂತೆ, ಸಾಗಿ ಹೋಗುತ್ತದೆ.

ಸಾಮಾನ್ಯ ಚಲನೆಗಳ, ಸಾಮಾನ್ಯ ರೀತಿಯಲ್ಲಿ ಇರುವುದರ, ಸಾಮಾನ್ಯ ರೂಢಿಗಳ ಎಲ್ಲ ಬಗೆಯ ದೊಡ್ಡ ತರಂಗಗಳಿರುತ್ತವೆ, ಅವುಗಳನ್ನು ಹಿಂದಕ್ಕೆಸೆಯಲಾಗುತ್ತದೆ, ಅವು ಮರಳಿ ಬರುತ್ತವೆ, ಮುಳುಗಿಸಿಬಿಡಲು ಪ್ರಯತ್ನಿಸುತ್ತವೆ, ಅವುಗಳನ್ನು ಮತ್ತೆ ಹಿಂದಕ್ಕೆಸೆಯಲಾಗುತ್ತದೆ. ದೇಹ ಹಾಗೂ ದೈಹಿಕ ಪ್ರಜ್ಞೆ ಇವು ರಕ್ಷಣೆಗಾಗಿ ಹಳೆಯ ರೀತಿಗೆ ರಭಸದಿಂದ ಹಿಂತಿರುಗುತ್ತಿದ್ದುದನ್ನು, ಪಲಾಯನದಲ್ಲಿ ರಕ್ಷಣೆ ಕಂಡುಕೊಳ್ಳುತ್ತಿದ್ದುದನ್ನು ಹಲವಾರು ವರ್ಷಗಳ ಕಾಲ ನೋಡಬಲ್ಲವಳಾಗಿದ್ದೆ. ಆದರೆ ಇನ್ನುಮುಂದೆ ಹಾಗೆ ಮಾಡದಿರಲು ಮತ್ತು ತದ್ವಿರುದ್ಧವಾಗಿ "ವಿಘಟನೆಯಾಗುವುದಿದ್ದರೆ ಆಗಲಿ" ಎಂಬುದನ್ನು ಸ್ವೀಕರಿಸಲು ದೇಹದ ಮನವೊಲಿಸಲಾಗಿದೆ, ಆಗಲಿರುವುದನ್ನು ಅದು ಒಪ್ಪಿಕೊಳ್ಳುತ್ತದೆ.

ಮಾನಸಿಕವಾಗಿ, ಅದು ಭೌತಿಕ ಮನಸ್ಸಿನಲ್ಲಿ ಸಂಭವಿಸಿದಾಗ (ಅಂತಹದು ನನಗೆ ಹಲವಾರು ವರ್ಷಗಳ ಹಿಂದೆ ಸಂಭವಿಸಿತ್ತು, ಆದರೆ ಅದನ್ನು ನಾನು ಅವಲೋಕಿಸಿದ್ದೆ) ಜನರಿಗೆ ತಾವು ಹುಚ್ಚು ಹಿಡಿದವರಾಗಿದ್ದೇವೆ ಎಂಬ ಭಾವನೆ ತಂದುಕೊಡುತ್ತದೆ ಮತ್ತು ಅವರಿಗೆ ಭಯವುಂಟಾಗುತ್ತದೆ (ಮತ್ತು ಭಯದೊಂದಿಗೆ ವಿಷಯಗಳು ಸಂಭವಿಸುತ್ತವೆ), ಹಾಗಾಗಿ ಅವರು ಅದರಿಂದ ಪಾರಾಗಲು ತಮ್ಮ

ಸಾಮಾನ್ಯ ಜ್ಞಾನದತ್ತ ಗಡಬಡಿಸಿ ಮರಳಿ ಬರುತ್ತಾರೆ. ಅದು ಭೌತದ್ರವ್ಯದಲ್ಲಿ ಆಗುವುದಕ್ಕೆ (ಅದೇ ಅಲ್ಲ) ಸರಿಸಮವಾಗಿರುತ್ತದೆ. ಸಾಮಾನ್ಯ ಸ್ಥಿರತೆ ಮಾಯವಾಗುತ್ತಿದೆ ಎಂಬ ಭಾವನೆ ನಿಮಗೆ ಬರುತ್ತದೆ. ಸರಿ, ಬಹಳ ಕಾಲದವರೆಗೆ ರೂಢಿಗೆ ಹಿಂದಿರುಗುವುದಿತ್ತು. ಮತ್ತು ನಂತರ ನೀವು ಬಹಳ ಶಾಂತ ಸ್ಥಿತಿಯಲ್ಲಿರುತ್ತೀರಿ ಮತ್ತು ಅದೆಲ್ಲವನ್ನು ಮತ್ತೆ ಪ್ರಾರಂಭಿಸುತ್ತೀರಿ. ಆದರೆ ಈಗ ಜೀವಕೋಶಗಳು ಅದನ್ನು (ಹಿಂದಿರುಗುವುದನ್ನು) ಬಯಸುವುದಿಲ್ಲ. "ಏನೇ ಬರಲಿ, ನಾವು ಸಾಕಷ್ಟು ತೀವ್ರಗತಿಯಿಂದ ಕಂಡುಕೊಳ್ಳುತ್ತೇವೆ" ಎನ್ನುತ್ತವೆ, ಅದು ದೊಡ್ಡ ಸಾಹಸ.

"ನಾವು ಹೇಗಿರಲಿರುವೆವು?" ಎಂದು ಜೀವಕೋಶಗಳು ಕೇಳುತ್ತವೆ.

ಅದು ಸ್ವಾರಸ್ಯಕರವಾಗಿದೆ.

(Vol. 8, p. 30)

**ಜನವರಿ 24, 1968**

ಇಡಿಯಾದ ಆಂತರಿಕ ಮರು ಸಂಘಟನೆ ನಡೆಯುತ್ತಿದೆ. ನೋಡೋಣ. ನಾವಿನ್ನೂ ಸಂಕ್ರಮಣದ ಅವಧಿಯಲ್ಲಿದ್ದೇವೆ.

ಬಹುಶಃ ಒಂದು ಬಗೆಯ ಯಾಂತ್ರಿಕ ಸ್ಥಿರತ್ವ (fixity) ಮಾಯವಾಗಲಿದೆ, ಅದು ನನ್ನ ನಂಬಿಕೆ. ಬದಲಾಗುವುದರಲ್ಲಿ ಅದು ಮೊದಲನೆಯದು. ಆ ಯಾಂತ್ರಿಕ ಸ್ಥಿರತ್ವ ಅವಶ್ಯವಾಗಿತ್ತು. ರೂಢಿಯ ರೀತಿಯಲ್ಲಿ ಕಾರ್ಯ ಕೈಕೊಳ್ಳುವುದು ಸಾಧ್ಯವಾಗುವಂತಾಗಲು ಭೌತಿಕ ಜೀವನ ಅತ್ಯಂತ ಯಾಂತ್ರಿಕವಾಗಿತ್ತು. ಸರಿ, ಅದೇ ಈಗ ಮಾಯವಾಗುತ್ತಿದೆ. ಆದರೆ ಸಂಕ್ರಮಣ ಕಠಿಣವಾದದ್ದು.

(Vol. 9, p. 34)

**ಏಪ್ರಿಲ್ 23, 1968**

ಅದು ಅತ್ಯಂತ ಸ್ವಾರಸ್ಯಕರವಾಗಿದೆ, ಬಹಳ ವಿಚಿತ್ರವಾಗಿದೆ, ವಿಚಿತ್ರವಾದ ಸಂವೇದನೆ, ಅದು ಬಹಳ ಕಾಲದಿಂದ ಹಾಗಿದೆ, ಹಾಗಿತ್ತೋ ಇಲ್ಲವೋ ನನಗೆ ತಿಳಿಯದು, ಆದರೆ ಇತ್ತೀಚಿನ ಕೆಲವು ದಿನಗಳಲ್ಲಿ ಅದು ಬಹಳ ಗಾಢವಾಗಿದೆ. ನಿಖರವಾಗಿದೆ. ... ಹೀಗಿರುವ ಸಂವೇದನೆ (ಶ್ರೀಮಾತೆಯವರು ಅನಿಶ್ಚಿತ ಸ್ಥಿತಿಯಲ್ಲಿ ಅತ್ತ ಇತ್ತ ತೂಗುತ್ತಿರುವ ಸಂಜ್ಞೆ ಮಾಡುತ್ತಾರೆ.)

ಹಳೆಯ ರೀತಿಯಲ್ಲಿ ಇರುವುದರಿಂದ (ವೈಯಕ್ತಿಕವಾದದ್ದರಿಂದ ಅಲ್ಲ, ಆದರೆ ಪೃಥ್ವಿಯ ಮೇಲಿರುವ ರೀತಿಯಿಂದ) ಹೊರಗೆ ಬಂದ ಸ್ಥಿತಿ ಹಾಗೂ ಹೊಸ ಬಗೆಯ ಜೀವನದಲ್ಲಿ ಪ್ರವೇಶಿಸಲು ತುದಿಯಂಚಿನಲ್ಲಿ ನಿಂತಿರುವ ಸ್ಥಿತಿ ಇವೆರಡು ಇರುವ ಜಗತ್ತುಗಳ ನಡುವೆ ಉಂಟಾಗುವ ತೂಗುಯ್ಯಾಲೆಯ ಸಂವೇದನೆ.



ಸತ್ತೆಯ ಇಡಿಯಾದ ಹಳೆಯ ರೀತಿ (ಭಾವಿಸುವ, ಯೋಚಿಸುವ, ಪ್ರಜ್ಞೆಯ ಸ್ಥಿತಿಯದನ್ನೂ ಕೂಡ) ಯನ್ನು ನೋಡಲಾಗುತ್ತಿದೆ, ನಿಖರವಾಗಿ ವಿರೂಪ–ಗೊಂಡಿರುವ, ವ್ಯತ್ಯಾಸಕ್ಕೊಳಗಾಗಿರುವ ರೀತಿಯಲ್ಲಲ್ಲ, ಆದರೆ ಅದರ ಹಾಗಿರುವ ಏನೋ ಒಂದರ ಹಾಗೆ, ಅದು ಅಂತಹದಲ್ಲ. ಅದು ಸತ್ತೆ ಮಾನವ ರೀತಿಯಲ್ಲಿ ಇರುವಾಗಿನದು, ಗಾಢವಾಗಿ ಅಭಿವೃದ್ಧಿಗೊಂಡ ಮನಸ್ಸಿನಿಂದಾದುದು.

ಯಾವುದು ಬೆಳೆಯುತ್ತಿದೆ ಎಂಬುದು ಸ್ಪಷ್ಟವಿದೆ, ಅದು ದೈವೀಪ್ರಜ್ಞೆ, ಅದನ್ನು ಇನ್ನು ಮುಂದೆ ಶಬ್ದಗಳ ಮೂಲಕ ವಿವರಿಸಲಾಗದು, ವ್ಯಾಖ್ಯಿಸಲಾಗದು – ಅದು ದೈವೀಪ್ರಜ್ಞೆ, (ಅದಕ್ಕೂ ಹೆಚ್ಚಾಗಿ ಅದೇನಿದೆ ಎಂಬುದನ್ನು ಮನುಷ್ಯ ತಿಳಿದುಕೊಳ್ಳುತ್ತಿರುವ ಭಾವನೆ ಬರುತ್ತದೆ.) ಅದಿರುವ ಸ್ಥಿತಿ ದೈವೀಪ್ರಜ್ಞೆಯದು. ಆದರೆ ಅದಿನ್ನೂ ತುಂಡಾದ ಪ್ರಜ್ಞೆ, ಅದು ('ಪ್ರಯತ್ನ ಮಾಡುತ್ತಿದೆ' ಎಂದು ಹೇಳಲಾರೆ, ಏಕೆಂದರೆ ಅಲ್ಲಿ ಪ್ರಯತ್ನವಿರುವುದಿಲ್ಲ) ಇಡಿಯಾದ ಪ್ರಜ್ಞೆಯಲ್ಲಿ ರೂಪಾಂತರಗೊಳ್ಳುತ್ತಿರುತ್ತದೆ. ಹಾಗಾಗಿ ಅದು ಸಂಕ್ರಮಣದ ಸ್ಥಿತಿ (ತೂಗುಯ್ಯಾಲೆಯ ಅದೇ ಸಂಜ್ಞೆ ಮಾಡುತ್ತಾರೆ.) ಅದಿನ್ನೂ ಪ್ರಜ್ಞೆಯೇ (ನಿಖರವಾಗಿ ವ್ಯಕ್ತಿಗತ ಇಲ್ಲವೆ ವ್ಯಕ್ತಿವಿಶಿಷ್ಟವಾದದ್ದಲ್ಲ, ಆದರೆ ತುಂಡಾದದ್ದು, ಬೇರೆ ಶಬ್ದಗಳಲ್ಲಿ ಹೇಳುವುದಾದರೆ ವಸ್ತುನಿಷ್ಠವಾಗಿಸಿದ್ದು), ಏಕತೆಗಾಗಿ ಇರುವ ತನ್ನ ಚಲನೆಯ ಬಗ್ಗೆ ಅರಿವುಳ್ಳದ್ದು, ಅದಿನ್ನೂ ಅಂತಹದು, ಇಡಿಯಾದ ಏಕತೆಯಲ್ಲ.

ಹಾಗಾಗಿ ಅದು ಎಲ್ಲ ಬಗೆಯ ಅನುಭವಗಳಿರುವ ಪರಿಣಾಮ ಒದಗಿಸುತ್ತದೆ.

ಅದು (ಹೊಸ ಸ್ಥಿತಿ) ಏಕಾಗ್ರತೆಯ ಇಲ್ಲವೆ ಬೇರೆ ಯಾವುದರ ಪರಿಣಾಮವಲ್ಲ. ಅದು ಸಾಮಾನ್ಯ ರೀತಿಯಲ್ಲಿ ಇರುವಿಕೆ, ಕೊನೆಗೆ ಸತತ ಉಳಿಯುವಂತಹದು. ಆದರೆ ಅಲ್ಲಿ ಇನ್ನೂ ವಿಭಜನೆಗಳಿರುತ್ತವೆ: ಒಂದು ಪ್ರಜ್ಞೆ ಇನ್ನೊಂದನ್ನು ಅವಲೋಕಿಸುವ ಮನೋಭಾವ ಹೊಂದಿರುತ್ತದೆ ಮತ್ತು ಇನ್ನೂ ಒಂದು ಪ್ರಜ್ಞೆ ಮೊದಲಿನವೆರಡನ್ನು ಅವಲೋಕಿಸುತ್ತದೆ, ಈ ಅರ್ಥದಲ್ಲಿ ವಿಭಜನೆಯಿರುತ್ತದೆ. ... ಅದೆಲ್ಲವೂ ಇನ್ನೂ ಹೊಯ್ದಾಡುವ ಸ್ಥಿತಿ. ಭಿನ್ನ ಪ್ರಜ್ಞೆಗಳು ಒಂದು ಇನ್ನೊಂದನ್ನು ಅವಲೋಕಿಸುತ್ತಿರುವ, ವಸ್ತುನಿಷ್ಠವಾಗಿಸುತ್ತಿರುವ ಲೀಲೆಯಿರುತ್ತದೆ. ಹಾಗಾಗಿ ಅದಿನ್ನೂ ನಿರೀಕ್ಷಿಸಿದ ವಿಷಯವಾಗಿರುವುದಿಲ್ಲ.

ಅದೆಲ್ಲವೂ ದೇಹದಲ್ಲಿ, ಬಹುಶಃ ದೇಹದ ಭಿನ್ನ ಭಾಗಗಳಲ್ಲಿ ನಡೆಯುತ್ತಿದೆ. ನನಗದು ತಿಳಿಯದು. ಅಲ್ಲಿ ಪ್ರಜ್ಞೆಯ ಮುನ್ನಡೆಯ ಹಂತಗಳಿವೆ ಇಲ್ಲವೆ ದೇಹದ ಕಾರ್ಯವಿಧಾನಗಳಿಗೆ ಅನುಸಾರವಾಗಿ ಹೆಚ್ಚು ಕಡಿಮೆ ರೀತಿಯ ತಾದಾತ್ಮ್ಯಗಳಿವೆ. ನನಗದು ತಿಳಿಯದು. ಮತ್ತು ಕೆಳಮಟ್ಟದ ಹಂತದಲ್ಲಿ ಇನ್ನೂ ಮಾನಸಿಕ ಪ್ರಭಾವದ ಹಳೆಯ ಗುಪ್ತವಾಹಿನಿಗಳಿವೆ, ಅವುಗಳಲ್ಲಿಂದ ನಾವು ಉಚ್ಚತರ ಮನಸ್ಸು (ಅಂತರ್ಬೋಧೆ ಇತ್ಯಾದಿ) ಎಂದು ಕರೆಯಲಾದವುಗಳು ಇವೆ ಮತ್ತು ನಂತರ, ಬಾಹ್ಯದಿಂದ ಬರುವ ಶಕ್ತಿಗಳು, ಸೂಚನೆಗಳು, ರೂಪತಾಳಿದವುಗಳು ಸುತ್ತುವರಿದ ಲೀಲೆಯಿದೆ. ನಾನು ಬಾಹ್ಯದಿಂದ ಎಂದು ಹೇಳುತ್ತೇನೆ, ಆದರೆ 'ಬಾಹ್ಯದಿಂದ' ಎಂಬ ಭಾವನೆ ಇರುವುದಿಲ್ಲ. 'ಈ ಜನರು ಇಲ್ಲಿ', 'ಆ ಜನರು ಅಲ್ಲಿ' ಎಂಬ ಭಾವನೆ ಇನ್ನುಮುಂದೆ ಇರುವುದಿಲ್ಲ, ದೇಹಕ್ಕೂ ಕೂಡ ಈ ರೀತಿಯದಾಗಿರುವುದಿಲ್ಲ.

(ಶ್ರೀಮಾತೆಯವರು ಒಮ್ಮಿಂದೊಮ್ಮೆಗೆ ದೀರ್ಘ ಧ್ಯಾನದಲ್ಲಿ ಮಗ್ನರಾಗುತ್ತಾರೆ, ಆ ಸ್ಥಿತಿ (ಸತ್ಪ್ರೇಮನೊಂದಿಗಿನ ಭೇಟಿ) ಕೊನೆಗೊಳ್ಳುವವರೆಗೆ ಉಳಿದುಕೊಳ್ಳುತ್ತದೆ.)

(Vol. 9, p. 112)

**ಜೂನ 8, 1968**

ಕೆಲವು ಗಂಟೆಗಳ ಕಾಲ ಕಳೆದಿರಬಹುದು (ನನಗೆ ಅದು ನಿಖರವಾಗಿ ತಿಳಿದಿಲ್ಲ, ಏಕೆಂದರೆ ನಾನು ವೇಳೆಯತ್ತ ಲಕ್ಷ್ಯಕೊಟ್ಟರಲಿಲ್ಲ) ಪ್ರಜ್ಞೆಯನ್ನು ತಿರುವಿ ಹಾಕಿದ ಹಾಗಿತ್ತು. (ಅದಕ್ಕೆ ಯಾವ ಶಬ್ದವನ್ನು ಉಪಯೋಗಿಸಬೇಕೆಂಬುದು ನನಗೆ ತಿಳಿದಿಲ್ಲ), ಅಲ್ಲಿ ನಂತರ ಕೇಂದ್ರವೆಂಬುದು ಉಳಿದುಕೊಂಡಿರಲಿಲ್ಲ. ಪ್ರತಿಯೊಂದು ಸುತ್ತಲೂ ಸಂಘಟಿಸಿಕೊಳ್ಳಬೇಕಾಗಿದ್ದ ಆ ಕೇಂದ್ರ ಅಸ್ತಿತ್ವದಲ್ಲಿರಲಿಲ್ಲ, ಎಂದರೆ ತನ್ನ ಸುತ್ತ ಎಲ್ಲವನ್ನೂ ಸಂಘಟಿಸಿಕೊಂಡಿರಬೇಕಾದ ದೈವೀಪ್ರಜ್ಞೆ ಕೇಂದ್ರ ಪ್ರಜ್ಞೆಯಾಗಿರಲಿಲ್ಲ ಎಳ್ಳಷ್ಟೂ ಹಾಗಿರಲಿಲ್ಲ. ಅದು ಅಸಾಧಾರಣವಾಗಿ ಸರಳವಾದ ಮತ್ತು ಅದೇ ವೇಳೆಗೆ ಅತ್ಯಂತ ಸಂಕೀರ್ಣವಾದ ಏನೋ ಒಂದಾಗಿತ್ತು.

(ಶ್ರೀಮಾತೆಯವರು ದೀರ್ಘಕಾಲದ ವರೆಗೆ ಮೌನದಲ್ಲಿ ಉಳಿದುಕೊಳ್ಳುತ್ತಾರೆ)

ಈಗ ಕೇವಲ ಅದರ ನೆನಪು ಉಳಿದುಕೊಂಡಿದೆ, ಹಾಗಾಗಿ ಈಗ ಅದು ಅಂತಹದಾಗಿ ಉಳಿದುಕೊಂಡಿಲ್ಲ. ಈಗ ಕೇವಲ ಅದನ್ನು ನೆನಪಿಗೆ ತಂದುಕೊಳ್ಳುವುದಿದೆ.

ವಿಭಜನೆಗೊಳ್ಳುವ ಸಾಧ್ಯತೆ ಇರುವ ಭಾವನೆ ಕೂಡ ಅಸ್ತಿತ್ವದಲ್ಲಿರಲಿಲ್ಲ.



ಈಗ ನಾನು ನೋಡುತ್ತೇನೆ (ಶ್ರೀಮಾತೆಯವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾರೆ).

ಅದು ಒಂದು ಏಕತೆಯ ಹಾಗಿರುವುದಿದೆ, ಅಸಂಖ್ಯಾತ, ಮಿಲಿಯಗಟ್ಟಲೆ ಇದ್ದವುಗಳ ಏಕತೆ, ಅಸಂಖ್ಯಾತ ಉಜ್ವಲ ಬಿಂದುಗಳು. ತಮ್ಮ ಬಗ್ಗೆ ಅರಿವಿದ್ದ ಅಸಂಖ್ಯಾತ ಉಜ್ವಲ ಬಿಂದುಗಳಿಂದ ತಯಾರಾದ ಏಕೈಕ ದೈವೀಪ್ರಜ್ಞೆ.

ಅದು ಪರಿಪೂರ್ಣವಾಗಿ ದಡ್ಡತನದ್ದು ಎಂದು ತೋರಿಬರುತ್ತಿದೆ. ಮತ್ತು ಅದು ಎಲ್ಲ ಬಿಂದುಗಳ ಒಟ್ಟುಗೂಡುವಿಕೆಯಲ್ಲ, ತಿಳಿಯಿತೆ? ಅದು ಅದಲ್ಲ. ಇಡಿಯಾದುದಲ್ಲ, ಅದು ಏಕತೆ, ಆದರೆ ಅಸಂಖ್ಯಾತವಾಗಿ ಕೂಡಿಕೊಂಡ ಏಕತೆ, ಮತ್ತು ಶಬ್ದಗಳನ್ನು ಉಪಯೋಗಿಸಬೇಕಾದ ವಾಸ್ತವತೆಯಿಂದಾಗಿ ಅದು ದಡ್ಡತನದ್ದಾಗುತ್ತದೆ.

ಅಸಾಧ್ಯ. ಭಾಷೆ ಹೊಂದದಂತಹದು.

(Vol. 9, p. 158)

**ಜನೆವರಿ 4, 1969**

ಜನೆವರಿ 1 ರಂದು ನಿಜವಾಗಿ ವಿಚಿತ್ರವಾದ ಏನೋ ಒಂದು ಸಂಭವಿಸಿತು. ಅದರ ಬಗ್ಗೆ ಭಾವನೆ ತಂದುಕೊಂಡವಳು ನಾನೊಬ್ಬಳೇ ಆಗಿರಲಿಲ್ಲ. ಅದು ಮಧ್ಯರಾತ್ರಿ ಕಳೆದ ನಂತರ ಸ್ವಲ್ಪ ಸಮಯದಲ್ಲಿ ಪ್ರಾರಂಭವಾಯಿತು. ಆದರೆ ಅದರ ಬಗ್ಗೆ ಭಾವನೆ ನನಗೆ 2 ಗಂಟೆಗೆ ಬಂದಿತು. ಇತರರು ಬೆಳಿಗ್ಗೆ 4 ಗಂಟೆಗೆ ಅದರ ಬಗ್ಗೆ ಭಾವನೆ ತಂದುಕೊಂಡರು. ಕಳೆದ ಸಲ ನಾನು ಅದರ ಬಗ್ಗೆ ಕೆಲವು ಮಾತುಗಳನ್ನು ನಿನಗೆ ಹೇಳಿದ್ದೆ. ಆದರೆ ಆಶ್ಚರ್ಯಕರ ವಿಷಯವೆಂದರೆ ಅದು ನಾನು ನಿರೀಕ್ಷಿಸಿದ್ದ ಯಾವುದಕ್ಕೂ ಇಲ್ಲವೆ ನನ್ನ ಭಾವನೆಗೆ ಬಂದ ಯಾವ ವಿಷಯಕ್ಕೂ ಅನುರೂಪವಾಗಿರಲಿಲ್ಲ. (ನಾನು ಏನನ್ನೂ ನಿರೀಕ್ಷಿಸಿರಲಿಲ್ಲ.) ಅದು ಬಹಳ ಭೌತಿಕ ಸ್ವರೂಪದ್ದಾದ ಏನೋ ಒಂದಾಗಿತ್ತು, ಅದರರ್ಥ ಅದು ಬಾಹ್ಯದಲ್ಲಿತ್ತು – ಬಹಳ ಹೊರಗಿನದಾಗಿತ್ತು ಮತ್ತು ಬಂಗಾರದ ಬಣ್ಣದಿಂದ ಪ್ರಕಾಶಮಯವಾಗಿತ್ತು. ಅದು ಬಹಳ ಬಲವುಳ್ಳದ್ದಾಗಿತ್ತು, ಸಾಮರ್ಥ್ಯ–ಪೂರ್ಣವಾಗಿತ್ತು, ಆದರೆ ಅದರ ಗುಣಲಕ್ಷಣ ಹಸನ್ಮುಖದ ದಯಾಪರತೆ, ಶಾಂತಿಪೂರ್ಣ ಸಂತೋಷ, ಮತ್ತು ಸಂತೋಷ ಹಾಗೂ ಪ್ರಕಾಶಗಳಲ್ಲಿ ಅರಳಿಕೊಳ್ಳುವಿಕೆ ಇವೆಲ್ಲವುಗಳಿಂದ ಕೂಡಿಕೊಂಡಿತ್ತು. ಅದು ಹೊಸ ವರ್ಷದ

ಶುಭಾಶಯಗಳನ್ನು ಹೇಳುವ ಇಚ್ಛೆಯುಳ್ಳಂತಿತ್ತು. ಅದು ನನ್ನನ್ನು ಆಶ್ಚರ್ಯಚಕಿತಳನ್ನಾಗಿ ಮಾಡಿತೆಂದು ನಾನು ಹೇಳಲೇಬೇಕು.

ನನ್ನ ಅನುಭವದ ಪ್ರಕಾರ ಅದು ಮೂರು ಗಂಟೆಗಳ ಕಾಲ ಉಳಿದುಕೊಂಡಿತ್ತು. ನಂತರ ಅದರೊಡನೆ ಸಂಬಂಧ ಹೊಂದಿರುವುದನ್ನು ಬಿಟ್ಟುಕೊಟ್ಟೆ. ಮುಂದೇನಾಯಿತು ಎಂಬುದು ನನಗೆ ತಿಳಿಯದು. ಆದರೆ ಅದರ ಬಗ್ಗೆ ನಿನಗೆ ಕೆಲವು ಮಾತುಗಳನ್ನು ಹೇಳಿದ್ದೆ, ಹಾಗೆಯೇ ಬೇರೆ ಇಬ್ಬರು, ಮೂವರ ಹತ್ತಿರವೂ ಮಾತನಾಡಿದ್ದೆ, ಅವರೆಲ್ಲರಿಗೆ ಅದರ ಬಗ್ಗೆ ಭಾವನೆ ಬಂದಿತ್ತು. ಅದರರ್ಥ ಅದು ಬಹಳ ಭೌತಿಕವಾದದ್ದಾಗಿತ್ತು ಎಂದಾಗುತ್ತದೆ. ಅವರೆಲ್ಲರೂ ಆ ಬಗೆಯ ಸಂತೋಷದ ಭಾವನೆ ತಂದುಕೊಂಡಿದ್ದರು, ಆದರೆ ಅದು ಸ್ನೇಹಪರ, ಸಾಮರ್ಥ್ಯಪೂರ್ಣ ಸಂತೋಷ, ಓ ಬಹಳ ಮಧುರವಾದದ್ದು, ಬಹಳ ಹಸನ್ಮುಖದ್ದು, ಬಹಳ ದಯಾಪರತೆಯುಳ್ಳದ್ದು ... ಏನೋ ಒಂದು, ... ಅದೇನೆಂಬುದು ನನಗೆ ತಿಳಿದಿಲ್ಲ, ಆದರೆ ಅದು ಒಂದು ಬಗೆಯ ದಯಾಪರತೆ, ಹಾಗಾಗಿ ಅದು ಮಾನವನಿಗೆ ಅತಿ ಸಮೀಪವಾದದ್ದು ಮತ್ತು ಅಷ್ಟೊಂದು ಮೂರ್ತಸ್ವರೂಪದ್ದು, ಅದಕ್ಕೇನಾದರೂ ಸ್ವಾದವಿದ್ದರೆ ಅದೂ ಕೂಡ ಬಹಳ ಮೂರ್ತಸ್ವರೂಪದ್ದಾಗಿರುತ್ತಿತ್ತು. ನಂತರ ನಾನು ಅದರೊಂದಿಗೆ ಯಾವ ಬಗೆಯ ಸಂಬಂಧವನ್ನು ಉಳಿಸಿಕೊಳ್ಳಲಿಲ್ಲ, ಕೇವಲ ಇಬ್ಬರ ಹತ್ತಿರ ಅದರ ಬಗ್ಗೆ ಹೇಳಿದ್ದೆ, ಅವರೆಲ್ಲರೂ ಅದರ ಬಗ್ಗೆ ಭಾವನೆ ತಂದುಕೊಂಡಿದ್ದರು. ಈಗ ಅದು ಮಿಶ್ರಣಕ್ಕೊಳಗಾಗಿದೆಯೋ ಎಂಬುದು ನನಗೆ ತಿಳಿದಿಲ್ಲ, ಇಲ್ಲವೆ... ಅದು ಹೋಗಿಬಿಟ್ಟಿಲ್ಲ, ಕೇವಲ ಹೋಗಿಬಿಡುವುದಕ್ಕಾಗಿ ಅದು ಬಂದಿತ್ತೆಂಬ ಭಾವನೆಯನ್ನು ಅದು ಕೊಡುತ್ತಿಲ್ಲ.

ನನ್ನ ಭಾವನೆಗೆ ಬರುವ ವಸ್ತು–ವಿಷಯಗಳಿಗಿಂತ ಅದು ಹೆಚ್ಚು ಬಾಹ್ಯ ಸ್ವರೂಪದ್ದಾಗಿತ್ತು. ಮಾನಸಿಕವಾದದ್ದು ಇರಲೇ ಇಲ್ಲ. ಅದೊಂದು ಭವ್ಯ ವ್ಯಕ್ತಿವಿಶಿಷ್ಟತೆ ಎಂಬ ಭಾವನೆ ನನಗೆ ಬಂದಿತು (ಪೃಥ್ವಿಗೆ ಹೋಲಿಸಿದರೆ ಅದು ಹೆಚ್ಚು ಭವ್ಯವಾಗಿತ್ತು ಎಂಬ ಅರ್ಥದಲ್ಲಿ). (ಶ್ರೀಮಾತೆಯವರು ಚಿಕ್ಕ ವಸ್ತುವೊಂದನ್ನು ತಮ್ಮ ಕೈಗಳಿಂದ ಮಾಡಿದ ಪೊಳ್ಳು ಜಾಗದಲ್ಲಿ ಹಿಡಿದುಕೊಳ್ಳುತ್ತಾರೆ) ಒಂದು ಚೆಂಡಿನ ತರಹದ್ದು. ಅದೊಂದು ಭಾರೀ ಗಾತ್ರದ ವ್ಯಕ್ತಿವಿಶಿಷ್ಟತೆ, ಅಷ್ಟೊಂದು ದಯಾಪರತೆಯುಳ್ಳದ್ದಾಗಿತ್ತು, ಮತ್ತು ಮೇಲೆ ಬರುತ್ತಲಿತ್ತು. ... ಸಹಾಯ ನೀಡಲು ಬರುವ ವ್ಯಕ್ತಿಗತ ದೇವನ ಹಾಗಿದ್ದ ಭಾವನೆ ಬರುತ್ತಿತ್ತು. ಅದು ಎಷ್ಟೊಂದು



ಬಲಶಾಲಿಯಾಗಿತ್ತು, ಅದೇ ವೇಳೆಗೆ ಎಷ್ಟೊಂದು ಮಧುರ ಹಾಗೂ ವಿವೇಚನೆಯುಳ್ಳದ್ದಾಗಿತ್ತು!

ಹೆಚ್ಚಿನ ರೀತಿಯಲ್ಲಿ ಅದು ಹೊರಗಿನದು ಎಂಬ ಭಾವನೆ ಬರುತ್ತಿತ್ತು. ದೇಹ ಅದನ್ನು ಎಲ್ಲೆಡೆಯಲ್ಲಿ ಭಾವನೆಗೆ ತಂದುಕೊಂಡಿತು. (ಶ್ರೀಮಾತೆಯವರು ಮುಖವನ್ನು ಕೈಯನ್ನು ಸ್ಪರ್ಶಿಸುತ್ತಾರೆ), ಹೀಗೆ ಎಲ್ಲೆಡೆಯಲ್ಲಿದ್ದ ಭಾವನೆ ಬಂದಿತ್ತು.

ಅದಕ್ಕೇನಾಯಿತು, ಅದು ನನಗೆ ತಿಳಿದಿಲ್ಲ.

ಅದು ವರ್ಷದ ಪ್ರಾರಂಭ ಕಾಲ. ದೇವನೊಬ್ಬನ ಪ್ರಮಾಣದಲ್ಲಿರುವ ಯಾರೋ ಒಬ್ಬರು ಹೊಸ ವರ್ಷದ ಶುಭಾಶಯಗಳನ್ನು ಹೇಳಲು ಬಂದಹಾಗಿತ್ತು. ಹೊಸ ವರ್ಷವನ್ನು ಹರ್ಷದಾಯಕವನ್ನಾಗಿ ಮಾಡುವ ಸಾಮರ್ಥ್ಯ ಅದಕ್ಕಿತ್ತು. ಅದಿರುವ ರೀತಿ ಹಾಗಿತ್ತು.

ಆದರೆ ಅದೇನಿತ್ತು?

ಎಷ್ಟೊಂದು ಮೂರ್ತಸ್ವರೂಪದ್ದು.

ನನಗದು ತಿಳಿದು ಬರುತ್ತಿಲ್ಲ.

ಅದು ವ್ಯಕ್ತಿವಿಶಿಷ್ಟತೆಯಾಗಿತ್ತೆ? ಏಕೆಂದರೆ ಅದಕ್ಕೆ ಯಾವ ರೂಪವೂ ಇರಲಿಲ್ಲ, ಕೇವಲ ಅದು ತೆಗೆದುಕೊಂಡು ಬಂದಿದ್ದು (ಶ್ರೀಮಾತೆಯವರು ವಾತಾವರಣವನ್ನು ಕೈಗಳಿಂದ ಸ್ಪರ್ಶಿಸಿ ಭಾವನೆಗೆ ತೆಗೆದುಕೊಳ್ಳುವ ಸಂಜ್ಞೆ ಮಾಡುತ್ತಾರೆ) ಸಂವೇದನೆ ಹಾಗೂ ಭಾವನೆ, ಈ ಎರಡು ವಿಷಯಗಳನ್ನು ಮಾತ್ರ ತಂದಿತ್ತು. ಅದು ಅತಿಮಾನಸ ವ್ಯಕ್ತಿವಿಶಿಷ್ಟತೆ ಆಗಿರಬಹುದೇ ಎಂದು ಯೋಚಿಸಿದೆ, ಅದು ನಂತರ ಭೌತಿಕ ರೂಪಗಳಲ್ಲಿ ಪ್ರಕಟವಾಗಲಿದೆಯೆ?

ಆಗಿನಿಂದ ಈ ದೇಹ ಭಾವನೆಗೆ ತಂದುಕೊಳ್ಳುತ್ತಿದೆ (ಅದು ದೇಹದ ಎಲ್ಲೆಡೆಯಲ್ಲಿ ಹೆಚ್ಚಿನ ರೀತಿಯಲ್ಲಿ ಒಳಹರಡಿಕೊಂಡಿದೆ), ಅದು ಹೆಚ್ಚು ಸಂತೋಷಕರವಾದ, ಕಡಿಮೆ ಏಕಾಗ್ರತೆಗೊಳಗಾದ ಭಾವನೆ ತಂದುಕೊಳ್ಳುತ್ತಿದೆ, ಹೆಚ್ಚು ಸಂತೋಷಕರವಾದ, ಹಸನ್ಮುಖದಿಂದ ವಿಸ್ತರಿಸಿಕೊಳ್ಳುತ್ತಿರುವ ರೀತಿಯಲ್ಲಿ ಜೀವಿಸುತ್ತಿದೆ. ಉದಾಹರಣೆಗೆ ಅದು ಹೆಚ್ಚು ಸುಲಭವಾಗಿ ಮಾತನಾಡುತ್ತದೆ. ದಯಾಪರತೆ ಸತತ ಇರುವ ಲಕ್ಷಣವಿದೆ.

ಒಂದು ಮುಗುಳ್ನಗು, ತಿಳಿಯತೆ, ದಯಾಪರತೆಯ ಮುಗುಳ್ನಗು ಮತ್ತು ಅದೆಲ್ಲ ಶ್ರೇಷ್ಠ ದೈವೀ ಶಕ್ತಿಯೊಂದಿಗಿತ್ತು. ಅದು ನನಗೆ ತಿಳಿಯದು.

ನಿನಗಾವ ಭಾವನೆ ಬರಲಿಲ್ಲವೆ?

**ಸತ್ಪ್ರೇಮ :** *ಆ ದಿನ ನನಗೆ ತೃಪ್ತಿಯಿದ್ದ ಭಾವನೆಯಿತ್ತು.*

**ಶ್ರೀಮಾತೆ :** ಅಹಾ, ಅದೇ ಅದು, ಹೌದು, ಅದು ಸರಿಯಾಗಿದೆ.

ಅದು ಅತಿಮಾನಸ ವ್ಯಕ್ತಿವಿಶಿಷ್ಟತೆಯೆ? ಅತಿಮಾನಸ ದೇಹವಿದ್ದವರಲ್ಲಿ ಅದು ಪ್ರಕಟವಾಗುವುದೆ?

ಅದು ಪ್ರಕಾಶಮಯವಾಗಿತ್ತು, ಹಸನ್ಮುಖದಿಂದಿತ್ತು, ಅದರ ದೈವೀ ಸಾಮರ್ಥ್ಯದಿಂದಾಗಿ ಅಷ್ಟೊಂದು ದಯಾಪರವಾಗಿತ್ತು. ಮಾನವರಲ್ಲಿ ದಯಾಪರತೆ ದುರ್ಬಲವಾದ ಏನೋ ಒಂದು, ಅದಕ್ಕೆ ಸಮರ, ಸಂಘರ್ಷ ಇಷ್ಟವಾಗುವುದಿಲ್ಲ. ಇದು ಸ್ವಲ್ಪ ಮಟ್ಟಿಗೂ ಹಾಗಿರುವುದಿಲ್ಲ. ಅದು ತನ್ನನ್ನು ಮೇಲೆ ಹೇರುವ ದಯಾಪರತೆಯಾಗಿರುತ್ತದೆ. (ಶ್ರೀಮಾತೆಯವರು ತಮ್ಮ ಎರಡೂ ಮುಷ್ಟಿಗಳನ್ನು ತಾವು ಕುಳಿತಿದ್ದ ಕುರ್ಚಿಯ ಕೈಗಳ ಮೇಲೆ ಒತ್ತಿ ಹಿಡಿಯುತ್ತಾರೆ)

ಅದರ ಬಗ್ಗೆ ನನ್ನಲ್ಲಿ ಅಭಿರುಚಿ ಉಂಟಾಯಿತು, ಏಕೆಂದರೆ ಅದು ಇಡಿಯಾಗಿ ಹೊಸದಾಗಿತ್ತು, ಎಷ್ಟೊಂದು ಮೂರ್ತಸ್ವರೂಪದ್ದಾಗಿತ್ತು! (ಶ್ರೀಮಾತೆಯವರು ತಮ್ಮ ಕುರ್ಚಿಯ ಕೈಗಳನ್ನು ಸ್ಪರ್ಶಿಸಿ ತೋರಿಸುತ್ತಾರೆ), ಭೌತಿಕ ಪ್ರಜ್ಞೆ, ಸಾಮಾನ್ಯವಾಗಿ 'ಇತರರು' ಎಂದು ಪರಿಗಣಿಸುವ ರೀತಿಯದಾಗಿತ್ತು, ಅಷ್ಟರ ಮಟ್ಟಿಗೆ ಅದು ಮೂರ್ತಸ್ವರೂಪದ್ದಾಗಿತ್ತು. ಅದರರ್ಥ ಅದು ಯಾವುದೋ ಅಂತರಂಗದ ಸತ್ತೆಯಿಂದ ಇಲ್ಲವೆ ಚೈತ್ಯಸತ್ತೆಯಿಂದ ಬಂದಿರಲಿಲ್ಲ. ಅದು ನೇರವಾಗಿ ದೇಹದ ಮೇಲೆ ಬಂದಿತ್ತು.

ಅದೇನಿರಬಹುದು? ಹೌದು, ಅದು ಆ ರೀತಿಯದಾಗಿರಬಹುದು. ಅದು ಸಂಭವಿಸಿದ ನಂತರ ದೇಹ ಒಂದು ಬಗೆಯ ನಿಶ್ಚಿತತೆಯ ಭಾವನೆ ತಂದುಕೊಂಡಿದೆ "ಏನಾಗಲಿದೆ?", "ಅತಿಮಾನಸ ಭೌತಿಕವಾಗಿ ಹೇಗಿರಬಹುದು?" ಎಂದು ದೇಹ ಆಶ್ಚರ್ಯಪಡುತ್ತಿತ್ತು. ಇನ್ನು ಮುಂದೆ ಅದರ ಬಗ್ಗೆ ತಿಳಿದುಕೊಳ್ಳುವ ತಳಮಳವಾಗಲಿ, ಅನಿಶ್ಚಿತತೆಯಾಗಲಿ ಇರುವುದಿಲ್ಲ. ಈ ನಂತರ ದೇಹ ಅದನ್ನು ಕುರಿತು ಯೋಚಿಸುವುದಿಲ್ಲ, ಅದು ಸಂತೋಷದಿಂದಿದೆ.

ಎಲ್ಲವೂ ಬಹಳ ಸರಿಯಾಗಿದೆ.

**ಸತ್ಪ್ರೇಮ :** *(ಆಧ್ಯಾತ್ಮಿಕವಾಗಿ) ಸಿದ್ಧಗೊಂಡ ದೇಹಗಳಲ್ಲಿ ಅದು ಒಳಹರಿದು ಹೋಗುವ ಏನೋ ಒಂದಾಗಿದೆಯೆ?*



**ಶ್ರೀಮಾತೆ :** ಹೌದು, ... ನನಗೆ ಹಾಗೆನಿಸುತ್ತದೆ. ಅದು ತನ್ನನ್ನು ಒಳಹರಿದು ಹೋಗಿಸಲು, ಅಭಿವ್ಯಕ್ತಪಡಿಸಲು ರೂಪತಾಳಿದೆ ಎಂದು ನನಗನಿಸುತ್ತದೆ. ಅದಕ್ಕೆ ಒಳಗಾದ ದೇಹಗಳು ಅತಿಮಾನಸದ್ದಾಗಿರುತ್ತವೆ.

ಇಲ್ಲವೆ ಅದು ಅತಿಮಾನವನಾಗಿರಬಹುದೆ? ನನಗೆ ತಿಳಿಯದು. ಅತಿಮನಸ್ಸು ಮತ್ತು ಮನಸ್ಸು ಹೊಂದಿರುವ ಸತ್ತೆಗಳಿಗೆ ಮಧ್ಯವರ್ತಿಯಾದ ಅತಿಮಾನವ–ನಾಗಿರಬಹುದು, ಅದು ಹೆಚ್ಚು ಮಾನವ ಸ್ವರೂಪದ್ದಾಗಿತ್ತು, ಆದರೆ ದೈವೀ ಪ್ರಮಾಣವಿರುವ ಮಾನವ, ನಿನಗೆ ಅರ್ಥವಾಯಿತೆ?

ದೌರ್ಬಲ್ಯಗಳಿಲ್ಲದ, ಛಾಯೆಗಳಿಲ್ಲದ ಮನುಷ್ಯ, ಅದು ಪೂರ್ತಿ ಪ್ರಕಾಶಮಯವಾಗಿತ್ತು – ಪೂರ್ತಿ ಪ್ರಕಾಶ ಹಾಗೂ ಮುಗುಳ್ನಗು ಇದ್ದವು, ಅದೇ ವೇಳೆಗೆ ಮಾಧುರ್ಯವಿತ್ತು.

ಹೌದು, ಅದು ಅತಿಮಾನವನಾಗಿರಬಹುದು.

(Vol. 10, p. 18)

**ಅಗಸ್ಟ 2, 1969**

ನಾನು "ಸಾವಿತ್ರಿ" ಮಹಾಕಾವ್ಯದ ಎರಡನೆಯ 'ಬುಕ್' ಓದುತ್ತಿದ್ದೇನೆ, ಅದು ರಾಜನ ಪರಿವರ್ತನೆ ಹಾಗೂ ಅನುಭವ ಕುರಿತಾಗಿದೆ. ಬಹಳ ದಿನಗಳ ಹಿಂದೆ ನಾನು ಅದನ್ನು ಓದಿದ್ದೆ, ಅದು ನನ್ನ ನೆನಪಿನಲ್ಲಿ ಉಳಿದಿರಲಿಲ್ಲ. ಈ ದಿನಗಳಲ್ಲಿ ನಾನು ಅದನ್ನು ಮತ್ತೆ ಓದುತ್ತಿದ್ದೇನೆ ... ಮತ್ತು ಅದು ನನ್ನ ದೇಹ ಈಗ ಒಳಗಾಗುತ್ತಿರುವ ಅನುಭವದ ವಿವರವಾದ ವರ್ಣನೆ ಇದ್ದ ಹಾಗಿದೆ! ಅತ್ಯಂತ ಅಸಾಧಾರಣವಾದದ್ದು. ಅದನ್ನು ನಾನು ಮತ್ತೆ ಓದಿದಾಗ ಅದು ನನ್ನನ್ನು ಮೂಕವಿಸ್ಮಯಕ್ಕೊಳಪಡಿಸಿತು.

ಪರಿಪೂರ್ಣವಾಗಿ ನನ್ನ ದೇಹ ಅದನ್ನು ನಕಲು ಮಾಡುತ್ತಿರುವಂತಿದೆ! ನನಗೆ ಅದರ ನೆನಪು ಎಳ್ಳಷ್ಟೂ ಉಳಿದಿರಲಿಲ್ಲ, ಕನಿಷ್ಠ ಮಟ್ಟದಲ್ಲೂ ಉಳಿದಿರಲಿಲ್ಲ. ಅದರರ್ಥ ಶ್ರೀ ಅರವಿಂದರು ಅದನ್ನು ಕಂಡುಕೊಂಡಿದ್ದರು, ಅವರು ಕಂಡುಕೊಂಡಿದ್ದರೋ ಅಥವಾ ಅನುಭವಕ್ಕೆ ತಂದುಕೊಂಡಿದ್ದರೋ ಎಂಬುದು ನನಗೆ ತಿಳಿಯದು. ಅವರು ಅದನ್ನು ಭೌತಿಕ ಸತ್ತೆಯ ಅತಿಮಾನಸೀಕರಣ ಎಂದು ಪರಿಗಣಿಸುತ್ತಾರೆ. 'ಸಾವಿತ್ರಿ'ಯಲ್ಲಿ ಅದಿದ್ದುದು ನಿನ್ನ ನೆನಪಿಗೆ ಬರುತ್ತಿದೆಯೆ?

(Vol. 10, p. 277)

**ಸಪ್ಟೆಂಬರ 10, 1969**

ನಾನು ಹೇಳುವುದೇನೂ ಇಲ್ಲ.

ನನ್ನ ದೇಹ ಅಸಾಧಾರಣ ಅನುಭವಗಳನ್ನು ಪಡೆಯುವುದರ ಮೂಲಕ ಸಾಗುತ್ತಿದೆ, ಆದರೆ ಅವುಗಳನ್ನು ಕುರಿತು ಹೇಳಲಾಗದು. ಎಲ್ಲ ಪರಿಸ್ಥಿತಿಗಳಲ್ಲಿ – ಅಸಂಖ್ಯಾತ ಪರಿಸ್ಥಿತಿಗಳಲ್ಲಿ ಮನುಷ್ಯ ಎಲ್ಲದರೊಡನೆ, ದೇಹದ ಪ್ರತಿಯೊಂದು ಭಾಗ, ಪ್ರತಿಯೊಂದು ಅಂಗ, ಪ್ರತಿಯೊಂದು ಚಟುವಟಿಕೆ, ಇವೆಲ್ಲವುಗಳೊಂದಿಗೆ ಒಂದರ ನಂತರ ಒಂದರಂತೆ ಮನುಷ್ಯ ಮೃತ್ಯುವಿನತ್ತ, ಜೀವನದತ್ತ ಹೇಗೆ ಸಾಗುತ್ತಾನೆ ಎಂಬುದನ್ನು ತೋರಿಸಿಕೊಡುವ ರೀತಿಯಲ್ಲಿ ಅದಿತ್ತು, ಅದನ್ನು ಕುರಿತು ಹೇಳುವುದು ಅಸಾಧ್ಯ. ಮನುಷ್ಯ ಅದರ ಬಗ್ಗೆ ಮಾತನಾಡಲಾರ.

ಅದು ಸ್ವಾರಸ್ಯಕರವಾಗಿದೆ.

ಆದರೆ ಈ ದೇಹವನ್ನು ಕುತೂಹಲಕರ ರೀತಿಯಲ್ಲಿ ನಿರ್ಮಾಣ ಮಾಡಲಾಗಿದೆ, ಏಕೆಂದರೆ ನೋವು ನೀಡುವ, ಹಾಳುಮಾಡುವ, ಹಾನಿಯನ್ನುಂಟು ಮಾಡುವ ಸಂಕಲ್ಪವಿದ್ದ ದುಷ್ಟತನದ ಬಾಹ್ಯ ಸಂಪರ್ಕ ಬಂದ ಪ್ರತಿಸಲ ಅದಕ್ಕೆ ಅರ್ಥವಾಗುವುದಿಲ್ಲ, 'ಅದಿರುವುದು ಹೇಗೆ ಸಾಧ್ಯ' ಎಂದು ಮಗುವಿನ ರೀತಿಯಲ್ಲಿ ದೇಹ ಹೇಳುತ್ತದೆ. ಅದನ್ನು ಒಂದು ವಿಶಿಷ್ಟ ಕಾರ್ಯಕ್ಕಾಗಿ ಉಪಯೋಗಿಸ–ಲಾಗುತ್ತದೆ ಎಂಬುದನ್ನು ನಾನು ನೋಡುತ್ತೇನೆ.

(ಮೌನ)

ದೇಹದ ಸಂವೇದನೆಗಳನ್ನು ಸ್ವೀಕರಿಸುವ ಭಿನ್ನ ರೀತಿಗಳನ್ನು ಕುರಿತು ಪ್ರತಿ ನಿಮಿಷ ಇಡಿಯಾಗಿ ಕಲಿಸಿಕೊಡುವುದೂ ಇದೆ. ಅದು ನೀವು ಯೋಗವನ್ನು ಕೈಕೊಳ್ಳುವಾಗ ಕಲಿಸಿಕೊಡುವ ರೀತಿಯದಾಗಿದೆ: ಎಲ್ಲ ಯೋಚನೆಗಳು, ಪ್ರತಿಕ್ರಿಯೆಗಳು, ಭಾವನೆಗಳು ಇಂತಹ ಎಲ್ಲ ಸಂಗತಿಗಳನ್ನು ಕುರಿತು ಹೊಂದಿರಬೇಕಾದ ಮನೋಭಾವ ಅದಾಗಿರುತ್ತದೆ. ನಿಜವಾದ ಮನೋಭಾವ ಹೊಂದಿರುವುದನ್ನು ನಿಮಗೆ ಕಲಿಸಿಕೊಡಲಾಗುತ್ತದೆ. (ಅದೆಲ್ಲವೂ ಭೂತಕಾಲಕ್ಕೆ ಸೇರಿದೆ.) ದೇಹಕ್ಕೆ ಅದೇ ಬಗೆಯ ಬೋಧನೆಯನ್ನು ಕೊಡಲಾಗುತ್ತಿದೆ: ಪ್ರತಿಯೊಂದು ಘಟನೆ, ಸಂಭವಿಸುವುದೆಲ್ಲ, ಪ್ರತಿಯೊಂದು ಸಂಪರ್ಕ ಇಂತಹವುಗಳನ್ನು ಕುರಿತಾದ ಸಂವೇದನೆಯ ಬಗ್ಗೆ ಹೊಂದಿರಬೇಕಾದ ಮನೋಭಾವ ಅದಾಗಿರುತ್ತದೆ. ವಿವರಗಳಲ್ಲಿ ಆ ಕಾರ್ಯವನ್ನು ಶ್ರಮ ವಹಿಸಿ



ಮಾಡಬೇಕು. ಅದರ ಜೊತೆಗೆ ಸರ್ವಸಾಧಾರಣ ಮನೋಭಾವವಿರುತ್ತದೆ, ಆದರೆ ದೇಹ ಆ ಸರ್ವಸಾಧಾರಣ ಮನೋಭಾವವನ್ನು ಹೊಂದಿದೆ, ಅದು ನಿರ್ಧಾರಿತ ವಿಷಯ – ಆದರೆ ಅದರ ಅಭ್ಯಾಸವನ್ನು ಪ್ರತಿ ನಿಮಿಷ ಶ್ರಮ ವಹಿಸಿ ಕೈಕೊಳ್ಳಬೇಕಾಗುತ್ತದೆ. ... ಅದು ಸ್ವಾರಸ್ಯಕರವಾಗಿರುವುದಿಲ್ಲ. ದೇಹ ಮಾತ್ರ ಅದರಲ್ಲಿ ಸ್ವಾರಸ್ಯ ಕಂಡುಕೊಳ್ಳುತ್ತದೆ; ಹಾಗಿದ್ದಾಗ್ಯೂ ಕೂಡ ಅದಕ್ಕೆ ಮರುಳಾಗಿರುವುದಿಲ್ಲ – ಅದು ಶ್ರಮದಾಯಕ ಕಾರ್ಯ. ಕ್ರಿಯೆಯಲ್ಲಿ ತೊಡಗಿರುವ ಮನೋಭಾವಗಳ ಪ್ರತಿಕ್ರಿಯೆ:– ಜನರು ಏನು ಹೇಳುತ್ತಾರೆ ಎಂಬುದನ್ನು ಕುರಿತಾಗಿ ಅಲ್ಲ, ಆದರೆ ಅವರ ಇಂಗಿತ ಸೂಚನೆಗಳು, ಮನೋಭಾವಗಳು ಇದೆಲ್ಲದಕ್ಕಾಗಿ ಇರುವ ಪ್ರತಿಕ್ರಿಯೆ. ದೇಹದ ನಿಜವಾದ ಧೋರಣೆ ಹೇಗಿರಬೇಕು ಎಂಬುದು ಮುಖ್ಯವಾದದ್ದು.

ಅದು ದೀರ್ಘಕಾಲ ತೆಗೆದುಕೊಳ್ಳುವ ಶ್ರಮದಾಯಕ ಕಾರ್ಯ, ಅದರಲ್ಲಿ ಮೋಹಗೊಳ್ಳುವಂತಹ ವಿಷಯವೇನೂ ಇಲ್ಲ.

(Vol. 10, p. 325)

**ನವೆಂಬರ 15, 1969**

ವಿಶೇಷವಾದ ಏನನ್ನಾದರೂ ತೆಗೆದುಕೊಂಡು ಬಂದಿರುವೆಯಾ?

... ನನ್ನದನ್ನು ಕುರಿತು ಹೇಳುವುದಾದರೆ ಒಂದು ಚಿಕ್ಕ ವಿಷಯದ ಹೊರತಾಗಿ ಬೇರೇನೂ ಇಲ್ಲ. ಕಳೆದ ರಾತ್ರಿ, ಮೊಟ್ಟಮೊದಲಿಗೆ, ದೈವೀಶಕ್ತಿಯ ಸಾನ್ನಿಧ್ಯದ ಅರಿವಾಯಿತು, ಅದು ಸುಮಾರು ಎರಡು ಗಂಟೆಗಳ ಕಾಲ ಇತ್ತು. (ನಾನು ಸತತ ಅಚಂಚಲಳಾಗಿ ನಾನಿರುವ ರೀತಿಯಲ್ಲಿದ್ದೆ.) ನಾನು ಸ್ಪಂಜಿನ ಹಾಗಿದ್ದೆ. ಅದನ್ನು ಹೇಗೆ ವಿವರಿಸಬೇಕೆಂಬುದು ನನಗೆ ತಿಳಿಯುತ್ತಿಲ್ಲ. ಅದು ಅದಲ್ಲ. ಅದು ಮೇಲಿನಿಂದ ಬರುತ್ತಿತ್ತು ಇಲ್ಲವೆ ಹೀಗೆ (ಸಮಪಾತಳಿಯಿಂದ ಬರುತ್ತಿರುವುದರ ಸನ್ನೆ ಮಾಡುತ್ತಾರೆ.) ಆದರೆ ಅದು ಒಳಗೆ ಬರುತ್ತಿತ್ತು. ನಾನೊಂದು ಕೊಳವೆ(pipe)ಯ ಹಾಗಿದ್ದೆ, ಒಳಗೆ ಬರುತ್ತಿದ್ದ ಆ ದೈವೀಶಕ್ತಿ ಆ ಕೊಳವೆಯಿಂದ, ಸತತ, ನಿಲ್ಲದೆ ಹೊರಗೆ ಹೋಗುತ್ತಿತ್ತು. ಒಂದು ಗಂಟೆಯ ಕಾಲ ಬಂಗಾರ ವರ್ಣವಿದ್ದ ಆ ದೈವೀಶಕ್ತಿ ಆ ರೀತಿ ಹೊರಟು ಹೋಯಿತು, ನಂತರ ವಿಶ್ವದ ತುಂಬ ಹರಡಿಕೊಂಡಿತು. ಮೊದಲ ಸಲ ನಾನದನ್ನು ಭೌತಿಕವಾಗಿ ಭಾವನೆಗೆ ತಂದುಕೊಂಡೆ. ಅದಕ್ಕೆ ಅದೆಷ್ಟು ಅಸಾಧಾರಣವಾದ ಸಾಮರ್ಥ್ಯವಿತ್ತು! ಮತ್ತು ಈ ದೇಹ ಒಂದು ನೀರಿನ ನಳ ಇಲ್ಲವೆ ಕೊಳವೆ ಇದ್ದ ಹಾಗಿತ್ತು. ನಿನಗೆ

ಅರ್ಥವಾಯಿತೆ? ಆದರೆ ಅದು ಒಂದು ನಿಖರವಾದ ಸ್ಥಾನದಿಂದ ಬಂದಿರಲಿಲ್ಲ. ನಾನು ಅದರಲ್ಲಿ ಮುಳುಗಿ ಹೋದ ಹಾಗಿತ್ತು ಮತ್ತು ನನ್ನ ಮೂಲಕ ಅದು ಪ್ರವಹಿಸುತ್ತ ಹೋಯಿತು. (ಶ್ರೀಮಾತೆಯವರು ತಮ್ಮಿಂದ ಹೊರಗೆ ಹರಿದು ಹೋಗುತ್ತಿರುವುದರ ಸಂಜ್ಞೆ ಮಾಡುತ್ತಾರೆ.) ಅದು ಬೆಳಗಿನ ಮೊದಲ ಸಮಯದಲ್ಲಿ ಎರಡು ಗಂಟೆಗಳಿಗಿಂತ ಹೆಚ್ಚಿನ ಕಾಲದವರೆಗೆ ಆ ರೀತಿ ಹರಿದು ಹೋಯಿತು. ಮತ್ತು ನಾನು ಆ ದೈವೀಶಕ್ತಿಯನ್ನು ನೋಡಿದೆ. ನನ್ನ ದೇಹ ಕೇವಲ ಅದಕ್ಕೆ ಪೃಥ್ವಿಯನ್ನು ಸ್ಪರ್ಶಿಸುವ ಮಾರ್ಗವೆಂದು ಕಾರ್ಯ ಮಾಡಿತು. – ದೈವೀಶಕ್ತಿ ಬಂದಿತು, ಮತ್ತು ಹೊರಗೆ ಹೋಗಿ ಹರಡಿಕೊಂಡಿತು. ಅದು ಹೋಗುವುದನ್ನು ನಾನು ನೋಡಿದೆ. ಕರೆ ಕೊಡುವವರ ಬಳಿ ಅದು ಹೋದುದನ್ನು ನೋಡಿದೆ. ಅದಕ್ಕೆ ಇಡಿಯಾಗಿ ಅರಿವಿದ್ದ ಪ್ರಜ್ಞೆಯಿಂದ ನಿರ್ದೇಶನ ದೊರೆತಿತ್ತು, ಅದು ಹಾಗಿರುವಾಗ ನಾನು... ಅಚಂಚಲಳಾಗಿ (ನಗುತ್ತ) ಕೇವಲ ಕೊಳವೆಯಾಗಿದ್ದೆ!

ಮೊದಲ ಸಲ ಅದು ಭೌತಿಕವಾಗಿ ಸಂಭವಿಸಿತ್ತು, ಅದು ಭೌತಿಕವಾಗಿತ್ತು.

(Vol. 10, p. 425)

**ಜುಲೈ 1, 1970**

ನನಗೊಂದು ಅನುಭವವಾಯಿತು, ಅದು ಸ್ವಾರಸ್ಯಕರವಾಗಿತ್ತೆಂದು ಕಂಡುಕೊಂಡೆ. ಅದು ನಿನ್ನೆ ಅಥವಾ ಮೊನ್ನೆ (ನಿಖರವಾಗಿ ಎಂದು ಎಂಬುದನ್ನು ಮರೆತಿದ್ದೇನೆ) Rಳು ನನ್ನೆದುರಿಗೆ ಮಂಡೆಯೂರಿ ಕುಳಿತಿದ್ದಳು. ನಾನು ಅವಳ ಚೈತ್ಯಸತ್ತೆಯನ್ನು ನೋಡಿದೆ. ಅದು ಅವಳ ತಲೆಯ ಮೇಲೆ ಎಂಟು ಇಂಚಿನಷ್ಟು ಎತ್ತರದಲ್ಲಿ ಬೆಳೆದಿರುವಂತೆ ಕಾಣಿಸುತ್ತಿತ್ತು. ಅಂತಹದನ್ನು ನಾನು ನೋಡಿದ್ದು ಮೊದಲ ಸಲವಾಗಿತ್ತು. ಅವಳ ಭೌತಿಕ ದೇಹ ಚಿಕ್ಕದಾಗಿತ್ತು. ಚೈತ್ಯಸತ್ತೆ ಈ ರೀತಿ ಎತ್ತರದ್ದಾಗಿತ್ತು. ಅದು ಲಿಂಗರಹಿತ ಸತ್ತೆಯಾಗಿತ್ತು, ಗಂಡಸೂ ಅಲ್ಲ, ಹೆಂಗಸೂ ಅಲ್ಲ. ಹಾಗಾಗಿ (ಅದು ಯಾವಾಗಲೂ ಅದೇ ರೀತಿಯದಾಗಿರಬಹುದು, ಆದರೆ ಆ ಸಮಯದಲ್ಲಿ ನಾನದನ್ನು ಬಹಳ ಸ್ಪಷ್ಟವಾಗಿ ನೋಡಿದೆ) ನನಗೆ ಹೇಳಿಕೊಂಡೆ: "ಆದರೆ ಭೌತಿಕರೂಪದ್ದಾಗಿರುವುದು ಹಾಗೂ ಅತಿಮಾನಸ ಸತ್ತೆಯಾಗಿರುವುದು ಕೇವಲ ಚೈತ್ಯಸತ್ತೆಯಾಗಿರುತ್ತದೆ!" ಎಂದು.

ನಾನು ನೋಡಿದೆ, ಅದು ಆ ರೀತಿಯದಾಗಿತ್ತು. ಅಲ್ಲಿ ಪ್ರತ್ಯೇಕವೆಂದು ತೋರಿಸುವ ಮುಖಲಕ್ಷಣಗಳಿದ್ದವು, ಆದರೆ ಬಹಳ ಸ್ಪಷ್ಟವಾಗಿರಲಿಲ್ಲ ಮತ್ತು ಸ್ಪಷ್ಟವಾಗಿ ಅದು ಹೆಣ್ಣೂ ಅಲ್ಲದ, ಗಂಡೂ ಅಲ್ಲದ ಸತ್ತೆಯಾಗಿತ್ತು, ಅದರ



ಮುಖಲಕ್ಷಣಗಳಲ್ಲಿ ಅವೆರಡರ ಲಕ್ಷಣಗಳು ಜೊತೆಗೂಡಿದ್ದವು. ಅದು ಅವಳಿರುವುದಕ್ಕಿಂತ ಹೆಚ್ಚು ಎತ್ತರವಾಗಿತ್ತು, ಅವಳ ಎಲ್ಲ ಬದಿಯಲ್ಲಿ ಅವಳನ್ನು ಮೀರಿಹೋಗಿತ್ತು (ಅವಳ ಭೌತಿಕ ದೇಹದ ಎಲ್ಲೆಡೆ ಎಂಟು ಇಂಚಿನಷ್ಟು ಹೆಚ್ಚು ಬೆಳೆದದ್ದರ ಸಂಜ್ಞೆ ಮಾಡುತ್ತಾರೆ.) ಅವಳು ಇಲ್ಲಿದ್ದಳು ಮತ್ತು ಅದು ಹೀಗಿತ್ತು. ಅದರ ಬಣ್ಣ, ಅದು ಬಹಳ ಭೌತಿಕವಾದದ್ದಾದರೆ ಅರೋವಿಲೆಯ ಬಣ್ಣ ಎಂದರೆ ಕಿತ್ತಳೆ ಬಣ್ಣದ್ದಾಗುವುದು. ಅದು ಹೆಚ್ಚು ಮೃದುವಾಗಿತ್ತು, ಪರದೆಯ ಹಿಂದೆ ಇದ್ದ ಹಾಗಿದ್ದು ಹೆಚ್ಚು ನಿಖರವಾಗಿರಲಿಲ್ಲ, ಆದರೆ ಅದರ ಬಣ್ಣ ಹಾಗಿತ್ತು, ಕೂದಲಿತ್ತು, ಆದರೆ ... ಅದು ಬೇರೇ ಏನೋ ಆಗಿತ್ತು. ಇನ್ನೊಂದು ಸಂದರ್ಭದಲ್ಲಿ ನಾನು ಹೆಚ್ಚು ಒಳ್ಳೆಯ ರೀತಿಯಲ್ಲಿ ನೋಡುವಂತಾಗಬಹುದು.

ಆದರೆ ಅದು ಬಹಳ ಸ್ವಾರಸ್ಯಕರವಾದದ್ದು ಎಂದೆನಿಸಿತು, ಏಕೆಂದರೆ ಆ ಸತ್ತೆ: "ಅತಿಮಾನಸ ಸತ್ತೆ ಹೇಗಿರಬಹುದು ಎಂದು ಆಶ್ಚರ್ಯಪಡುತ್ತಿರುವಿಯಲ್ಲವೆ? ... ಆದರೆ ಅದು ಇಲ್ಲಿದೆ, ಅದೇ ಇದು" ಎಂದು ನನಗೆ ಹೇಳುತ್ತಿರುವಂತೆ ತೋರಿಬಂದಿತು. ಮತ್ತು ಅದು ಅಲ್ಲಿತ್ತು, ಅವಳ ಚೈತ್ಯಸತ್ತೆ ಅದಾಗಿತ್ತು.

ಚೈತ್ಯಸತ್ತೆ ಭೌತಿಕರೂಪ ತಾಳುವುದು... ಮತ್ತು ಉತ್ಕ್ರಾಂತಿ ಮುಂದುವರಿಯುವಂತೆ ಮಾಡುವುದು ಎಂದು ಆಗ ಮನುಷ್ಯ ಅರ್ಥ ಮಾಡಿಕೊಳ್ಳುತ್ತಾನೆ.

ಯಾವುದೂ ಸ್ವೇಚ್ಛೆಯದಾಗಿಲ್ಲ, ಸೃಷ್ಟಿಯ ಹಿಂದೆ ಒಂದು ಬಗೆಯ ದೈವೀ ತರ್ಕವಿದೆ, ಅದು ಮಾನವ ತರ್ಕದ ಹಾಗಿಲ್ಲ, ಆದರೆ ನಮ್ಮ ತರ್ಕಕ್ಕಿಂತ ಬಹಳ ಶ್ರೇಷ್ಠವಾಗಿರುತ್ತದೆ (ಆದರೆ ಅದು ಅಸ್ತಿತ್ವದಲ್ಲಿದೆ) ಎಂಬ ಭಾವನೆಯನ್ನು ಈ ಸೃಷ್ಟಿ ನಮಗೆ ತಂದುಕೊಡುತ್ತದೆ. ನಾನದನ್ನು ನೋಡಿದಾಗ ಆ ಬಗೆಯ ತರ್ಕಕ್ಕೆ ಪೂರ್ಣ ತೃಪ್ತಿ ದೊರಕಿತು.

ಅದು ಆಶ್ಚರ್ಯವನ್ನುಂಟು ಮಾಡುವಂತಹದಿದೆ. Rಳು ಇಲ್ಲಿದ್ದಾಗ ಅತಿಮಾನಸ ಪ್ರಕಾಶ, ಯಾವ ಛಾಯೆಯನ್ನೂ ಉಳಿಸದೆ, ನನ್ನೊಳಗಿಂದ ಹಾಯ್ದು ಹೋಗುತ್ತಿದ್ದ ಅನುಭವವಾಯಿತು. Rಳಲ್ಲಿ ಅಂತಹದೇನೋ ಇದೆ, ಅದು ನನಗೆ ತಿಳಿಯದು. ಮತ್ತು ಈ ಸಲ ಅದು ನಿಜವಾಗಿ ಸ್ವಾರಸ್ಯಕರವಾಗಿತ್ತು, ಅದರಲ್ಲಿ ನಾನು ಬಹಳ ಸ್ವಾರಸ್ಯವಿರುವುದನ್ನು ಕಂಡುಕೊಂಡೆ. ಅದು ಪ್ರಶಾಂತವಾಗಿ ಅಲ್ಲಿತ್ತು ಮತ್ತು ನನಗೆ: "ನೀನು ಯಾವುದನ್ನು ಅರಸುತ್ತಿರುವೆಯೋ ಅದಿಲ್ಲಿದೆ, ಇದೇ ಅದು" ಎಂದು ಹೇಳುತ್ತಿತ್ತು.

ಮನಸ್ಸನ್ನು ಹಾಗೂ ಪ್ರಾಣಿಕವನ್ನು ನನ್ನ ದೇಹದಿಂದ ಏಕೆ ಹೊರಗೆ ಹಾಕಲಾಗಿದೆ, ಚೈತ್ಯಸತ್ತೆಯನ್ನು ಏಕೆ ಉಳಿಸಲಾಗಿದೆ ಎಂಬುದನ್ನು ಆಗ ನಾನು ಅರಿತುಕೊಂಡೆ. (ಸ್ವಾಭಾವಿಕವಾಗಿ ಚೈತ್ಯಸತ್ತೆಯೇ ಮೊದಲು ಎಲ್ಲ ಚಟುವಟಿಕೆಗಳ ಮೇಲೆ ಆಳಿಕೆ ನಡೆಸುತ್ತಿತ್ತು, ಹಾಗಾಗಿ ಅದು ಹೊಸ ವಿಷಯವಾಗಿರಲಿಲ್ಲ, ಆದರೆ ಅಲ್ಲಿ ತೊಂದರೆಗಳೇನೂ ಉಳಿದುಕೊಂಡಿರಲಿಲ್ಲ; ಪ್ರಾಣಿಕದಿಂದ ಹಾಗೂ ಮನಸ್ಸಿನಿಂದ ಬರುತ್ತಿದ್ದ ಗೋಜಲು ಸ್ಥಿತಿ ಹಾಗೂ ಅವು ತಮ್ಮ ಎಲ್ಲ ಗುರುತುಗಳನ್ನು, ಪ್ರವೃತ್ತಿಗಳನ್ನು ಅಧಿಕವಾಗಿಸುತ್ತಿದ್ದುದು ಇದೆಲ್ಲ ಹೋಗಿಬಿಟ್ಟಿದೆ.) ಹಾಗಾಗಿ "ಅಹಾ, ಅದೇ ಇದು, ಈ ಚೈತ್ಯಸತ್ತೆಯೇ ಅತಿಮಾನಸ ಸತ್ತೆಯಾಗಲಿದೆ" ಎಂಬುದನ್ನು ನಾನು ಅರಿತುಕೊಂಡೆ.

ಅದು ಹೇಗೆ ಕಾಣಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವ ತೊಂದರೆಯನ್ನು ನಾನು ತೆಗೆದುಕೊಂಡಿರಲಿಲ್ಲ. ಆದರೆ ನಾನು ಅದನ್ನು ನೋಡಿದಾಗ ನನಗೆ ಅರ್ಥವಾಯಿತು. ಮತ್ತು ನಾನದನ್ನು ಇನ್ನೂ ನೋಡುತ್ತಿದ್ದೇನೆ. ಅದರ ನೆನಪನ್ನು ಉಳಿಸಿಕೊಂಡಿದ್ದೇನೆ. ಅದರ ಕೂದಲು ಬಹುಮಟ್ಟಿಗೆ ವಿಚಿತ್ರ ರೀತಿಯಲ್ಲಿ ಕೆಂಪು ಬಣ್ಣದ್ದಾಗಿತ್ತು (ಅದು ಕೆಂಪು ಕೂದಲಿನ ಹಾಗಿರಲಿಲ್ಲ, ಆದರೆ ಅಂತಹದರ ಹಾಗೆ ಕಾಣಿಸಿತು). ಅದರ ಮುಖಭಾವ ಎಷ್ಟೊಂದು ಉತ್ಕೃಷ್ಟವಾಗಿತ್ತು, ಸೌಮ್ಯ ರೀತಿಯಲ್ಲಿ ವ್ಯಂಗ್ಯ ಸ್ವಭಾವದ್ದಾಗಿತು, ಓಹ್, ಅದು ಅಸಾಧಾರಣವಾಗಿತ್ತು!

ನಿನಗೆ ಅರ್ಥವಾಯಿತೆ? ನನ್ನ ಕಣ್ಣುಗಳು ತೆರೆದಿದ್ದವು. ಅದು ಬಹುಮಟ್ಟಿಗೆ ಭೌತಿಕ ದರ್ಶನವಾಗಿತ್ತು.

ನಂತರ ಮನುಷ್ಯ ಅರ್ಥ ಮಾಡಿಕೊಳ್ಳುತ್ತಾನೆ. ಒಮ್ಮಿಂದೊಮ್ಮೆಗೆ ಎಲ್ಲ ಪ್ರಶ್ನೆಗಳು ಮಾಯವಾದವು, ಅದು ಬಹಳ ಸ್ಪಷ್ಟ ಹಾಗೂ ಸರಳವಾಯಿತು.

(ಮೌನ)

ಜೀವಿಸುತ್ತ ಹೋಗುವುದು, ನಿಖರವಾಗಿ, ಚೈತ್ಯಸತ್ತೆಯೇ ಆಗಿರುತ್ತದೆ ಹಾಗಾಗಿ ಅದು ಭೌತಿಕರೂಪ ತಳೆದರೆ ಆಗ ಮೃತ್ಯುವಿನ ಆವಶ್ಯಕತೆ ಇರುವುದಿಲ್ಲ. ಯಾವುದು ದೈವೀಸತ್ಯಕ್ಕೆ ಅನುಗುಣವಾಗಿರುವುದಿಲ್ಲವೋ, ಚೈತ್ಯಸತ್ತೆಯ ಪ್ರತೀಕದಲ್ಲಿ ಪರಿವರ್ತನೆಗೆ ಒಳಗಾಗುವುದಿಲ್ಲವೋ, ಚೈತ್ಯಸತ್ತೆಯ ಭಾಗವಾಗುವುದಿಲ್ಲವೋ ಅದೆಲ್ಲ ಹೊರಟು ಹೋಗುತ್ತದೆ.

ಅದು ನಿಜವಾಗಿ ಸ್ವಾರಸ್ಯಕರವಾಗಿದೆ.

(Vol. 11, p. 245)



**ಸಪ್ಟಂಬರ 1, 1971**

ಭಗವಂತನಿಂದ ಮಾತ್ರ ಅಸ್ತಿತ್ವದಲ್ಲಿರಲು, ಪ್ರತಿಯೊಂದಕ್ಕೂ – ಪರಿಪೂರ್ಣವಾಗಿ ಎಲ್ಲದಕ್ಕೂ, ಯಾವುದನ್ನೂ ಹೊರತುಪಡಿಸದೆ ಅವನನ್ನೇ ನೆಚ್ಚಿಕೊಂಡಿರಲು ದೇಹಕ್ಕೆ ಕಲಿಸಿಕೊಡಲಾಗುತ್ತದೆ. ಅದಕ್ಕಾಗಿ ಒತ್ತಡ ಕೂಡ ಇದೆ... ನನ್ನ ಪ್ರಜ್ಞೆ ದೈವೀಪ್ರಜ್ಞೆಯೊಂದಿಗೆ ಅತ್ಯಧಿಕವಾಗಿ ಕೂಡಿಕೊಂಡಾಗ ಮಾತ್ರ ಅಸ್ತಿತ್ವದ ಬಗ್ಗೆ ಭಾವನೆ ಬರುತ್ತದೆ. ಅದು ಅಸಾಧಾರಣವಾಗಿ ಗಾಢವಾಗಿದೆ. ಭೌತಿಕವು ಬದಲಾವಣೆಗೆ ಒಳಗಾದ ನಂತರ ಅದು ಬದಲು ಮಾಡಲಾಗದ, ಸಂಪೂರ್ಣವಾಗಿ ಘನರೂಪದ್ದಾದ ಏನೋ ಒಂದಾಗುವುದು. ಭಗವಂತನಲ್ಲಿರುವುದು ಮತ್ತು ಅವನಿಂದ, ಅವನಿಗಾಗಿ ಮಾತ್ರ ಅಸ್ತಿತ್ವದಲ್ಲಿರುವುದು ಮತ್ತು ನಂತರ, ಸ್ಪಷ್ಟವಾಗಿ ಸರ್ವಸಾಧಾರಣ ಪ್ರಜ್ಞೆಯಲ್ಲಲ್ಲ, ಆದರೆ ಕೇವಲ ಮಾನವ ಪ್ರಜ್ಞೆಯಲ್ಲಿರುವುದು ಇವುಗಳ ನಡುವಿರುವ ಅಂತರ ಎಷ್ಟಿದೆ ಎಂದರೆ ಒಂದನ್ನು ಇನ್ನೊಂದಕ್ಕೆ ಹೋಲಿಸಿದರೆ ಅದು ಮೃತ್ಯುವಿನ ಹಾಗೆ ಕಂಡುಬರುವುದು, ಅದು ಹಾಗಿದೆ ... ಅದರರ್ಥ ಭೌತಿಕ ಸಿದ್ಧಿ, ನಿಜವಾಗಿ, ಮೂರ್ತರೂಪದ ಸಿದ್ಧಿಯಾಗಿರುತ್ತದೆ.

ಚೈತನ್ಯ ಕೇಂದ್ರೀಕರಣಗೊಳ್ಳುತ್ತಿರುವುದರ ಪ್ರಾರಂಭದಲ್ಲಿದೆ (ಓಹ್! ಅದು ಅಲ್ಲಿ ಇನ್ನೂ ಇಲ್ಲ, ಅದಿನ್ನೂ ಬಹಳ ದೂರದಲ್ಲಿದೆ, ಆದರೆ ...) ವಿಷಯಗಳು ಹೇಗಿರಬಲ್ಲವು ಎಂಬುದರ ಗ್ರಹಿಕೆಯ ಪ್ರಾರಂಭವಿದೆ. ಅದು ನಿಜವಾಗಿ ಬಹಳ ಅದ್ಭುತವಾದದ್ದು. ಮತ್ತು ಅಷ್ಟೊಂದು ಸಾಮರ್ಥ್ಯಪೂರ್ಣವಾದದ್ದು. ಬೇರೆ ಇನ್ನಾವುದೂ ಹೊಂದಿರಲಾರದ ಸಾಮರ್ಥ್ಯ ಹಾಗೂ ನೈಜತೆ ಇದೆ – ಪ್ರಾಣಿಕ ಇಲ್ಲವೆ ಮಾನಸಿಕವಾದ ಪ್ರತಿಯೊಂದೂ ಮತ್ತು ಅಂತಹದೆಲ್ಲವೂ ಮಬ್ಬುಗವಿದದ್ದು, ಅವಾಸ್ತವಿಕವಾದದ್ದು ಎಂದು ತೋರಿಬರುತ್ತದೆ. ಅದು ಹಾಗಿರುವಾಗ ಇದು ಮೂರ್ತಸ್ವರೂಪದ್ದು (ಶ್ರೀಮಾತೆಯವರು ಮುಷ್ಠಿಗಳನ್ನು ಬಿಗಿಹಿಡಿದು ತೋರಿಸುತ್ತಾರೆ). ಮತ್ತು ಬಹಳ ದೃಢವಾದದ್ದು.

ಕೆಲ ಸಮಸ್ಯೆಗಳನ್ನು ಇನ್ನೂ ಪರಿಹರಿಸಬೇಕಾಗಿದೆ, ಅದನ್ನು ಶಬ್ದಗಳಿಂದ, ಯೋಚನೆಗಳಿಂದ ಮಾಡಲಾಗುವುದಿಲ್ಲ, ಮತ್ತು ವಿಷಯಗಳು ತೋರಿಸಿಕೊಡಲು ಬರುತ್ತವೆ – ಕೇವಲ ವೈಯಕ್ತಿಕ ವಿಷಯಗಳಲ್ಲ, ಆದರೆ ನನ್ನ ಸುತ್ತಲಿರುವವರಿಂದ, ಜನರು, ವಿಷಯಗಳು, ಪರಿಸ್ಥಿತಿಗಳು ಇವೆಲ್ಲವುಗಳಿಂದ ಕಲಿಸಿಕೊಡಲಾಗುತ್ತದೆ,

ಅದೆಲ್ಲವೂ ಕಲಿಸಿಕೊಡಲು ಬರುತ್ತದೆ, ದೇಹ ನಿಜವಾದ ಪ್ರಜ್ಞೆ ಹೊಂದುವುದನ್ನು ಕಲಿಸಿಕೊಡಲು ಬರುತ್ತದೆ. ಅದು ಅದ್ಭುತವಾದದ್ದು.

(ಶ್ರೀಮಾತೆಯವರು ಅಂತರ್ಮುಖಿಯಾಗುತ್ತಾರೆ)

ಪ್ರಕಟವಾಗಲು ಬಯಸುತ್ತಿರುವ ದೈವೀ ಸಾಮರ್ಥ್ಯವನ್ನು ಸಹಿಸಿಕೊಳ್ಳುವ ಕ್ಷಮತೆಯುಳ್ಳ ಭೌತಿಕ ಸತ್ತೆಯನ್ನು ಸೃಷ್ಟಿಸುವ ಸಮಸ್ಯೆ ಇತ್ತೆಂದು ತೋರಿಬರುತ್ತದೆ. ಪ್ರಕಟವಾಗಲಿರುವ, ಸ್ವಾಸ್ಥ್ಯ ತಪ್ಪಿಸುವ ದೈವೀ ಸಾಮರ್ಥ್ಯವನ್ನು ತಾಳಿಕೊಳ್ಳಲು ಎಲ್ಲ ಸರ್ವಸಾಧಾರಣ ದೈಹಿಕ ಪ್ರಜ್ಞೆಗಳು ಅತಿ ತಿಳುವಾದವುಗಳು, ಮತ್ತು ಚೂರು ಚೂರಾಗುವಂತಹವು ಆಗಿರುತ್ತವೆ, ಹಾಗಾಗಿ ದೇಹ ಅದನ್ನು ರೂಢಿಸಿಕೊಳ್ಳುತ್ತಿದೆ. ಅದು ಒಮ್ಮೆಗೆ ಮುಂದೆ ದೂರದಲ್ಲಿ ಇರುವ ಅದ್ಭುತ ಕ್ಷಿತಿಜದ ಮಿನುಗು ನೋಟವನ್ನು ಹಿಡಿದುಕೊಂಡ ಹಾಗಿದೆ, ಆದರೆ ಅದು ಪರವಶಗೊಳಿಸುವಷ್ಟು ಅದ್ಭುತವಾಗಿದೆ! ಆಗ ಅದನ್ನು ತಾಳಿಕೊಳ್ಳುವಷ್ಟರ ಮಟ್ಟಿಗಿನದನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡಲಾಗುತ್ತಿದೆ.

ಸ್ವಲ್ಪ ಮಟ್ಟಿಗಿನ ಹೊಂದಾವಣೆ ಮಾಡಿಕೊಳ್ಳುವುದರ ಆವಶ್ಯಕತೆ ಇದೆ.

ಆಹಾರ ಮತ್ತು ವಿಶ್ರಾಂತಿ ಇವುಗಳಿಗೆ ಸಂಬಂಧಪಟ್ಟುದುದರಲ್ಲಿ ಅದು ಸ್ಪಷ್ಟವಾಗಿದೆ. ಅದು ಬಹಳ ವಿಚಿತ್ರವಾದದ್ದು. ಸಂಕ್ರಮಣವಿದೆ... ಸರಿಯಾಗಿ ಸಂಕ್ರಮಣದ ಮಧ್ಯದಲ್ಲಿದ್ದೇನೆ.

ಅದಕ್ಕೆ (ದೇಹಕ್ಕೆ) ಸಾಕಷ್ಟು ನಮ್ಯತೆ ಇದೆಯೆ? ನನಗೆ ತಿಳಿಯದು.

ಅದು ನಮ್ಯತೆಗೆ ಸಂಬಂಧಿಸಿದ ಪ್ರಶ್ನೆ. ಪ್ರಕಟವಾಗಲು ಬಯಸುತ್ತಿರುವ ದೈವೀ ಸಾಮರ್ಥ್ಯಕ್ಕೆ ಯಾವ ಅಡೆತಡೆಯನ್ನೂ ಉಂಟು ಮಾಡದಂತೆ ತಾಳಿಕೊಳ್ಳಲು ಮತ್ತು ಕಳುಹಿಸಿಕೊಡಲು ಶಕ್ತಳಾಗಬೇಕಾದುದರ ಪ್ರಶ್ನೆ. (ಏನೋ ಒಂದು ತಮ್ಮ ಮೂಲಕ ಹರಿದು ಹೋಗುತ್ತಿರುವುದರ ಸಂಜ್ಞೆ ಮಾಡುತ್ತಾರೆ.)

ಅಸ್ತಿತ್ವದಲ್ಲಿ ಬರುವಿಕೆ (appearance) ಭವಿಷ್ಯತ್ತಿನಲ್ಲಾಗುವ ಪರಿಣಾಮ. ಆ ಕಾರಣದಿಂದಾಗಿ ಅಸ್ತಿತ್ವ ಕೊನೆಗೆ ಬದಲಾಗುವಂತಹದು.

(Vol. 12, p. 232)

**ನವೆಂಬರ 27, 1971**

(ಶ್ರೀಮಾತೆಯವರು ಸತ್ಪ್ರೇಮನಿಗೆ ಕಾಗದವೊಂದನ್ನು ಕೊಡುತ್ತಾರೆ)



ಇದರಲ್ಲಿ ನಿನ್ನೆ ನನಗಾದ ಅನುಭವದ ವಿವರಗಳಿವೆ.

(ಶ್ರೀಮಾತೆಯವರು ಕಣ್ಣು ಮುಚ್ಚಿಕೊಂಡಿದ್ದಾರೆ, ಅವರ ಮುಖದಲ್ಲಿ ಮುಗುಳ್ನಗು ಇದೆ.)

ಒಮ್ಮಿಂದೊಮ್ಮೆಗೆ ನಾನು ಜಗತ್ತನ್ನು ಇನ್ನೊಂದು ರೀತಿಯಲ್ಲಿ ನೋಡಿದೆ, ಒಂದು ಕ್ಷಣ ಒಮ್ಮಿಂದೊಮ್ಮೆಗೆ ಭಗವಂತ ಜಗತ್ತನ್ನು ನೋಡುವ ರೀತಿಯಲ್ಲಿ ನೋಡಿದೆ. ತಿಳಿಯಿತೆ? ಅಲ್ಲಿ ಮಾನವ ಸಹಜ ದೃಷ್ಟಿಯಿರಲಿಲ್ಲ. ನಾನು ಅದ್ಭುತವಾದ ಏನನ್ನೋ ನೋಡಿದೆ. ಅದನ್ನು ಕುರಿತು ಹೇಳಲು ಶಬ್ದಗಳಿಲ್ಲ, ನಂತರ ಮಾನವ ಪ್ರಜ್ಞೆ ನಿಧಾನವಾಗಿ ಮರಳಿ ಬಂದಿತು. ಓಹ್... (ಶ್ರೀಮಾತೆಯವರು ತಮ್ಮ ಹಣೆಯನ್ನು ಕೈಗಳಿಂದ ಹಿಡಿದುಕೊಳ್ಳುತ್ತಾರೆ.)

"ಭಗವಂತ ಎಲ್ಲ ಮಾನವ ಸತ್ತೆಗಳನ್ನು ಸಮಾನವಾಗಿ ಪ್ರೀತಿಸುತ್ತಾನೆ. ಆದರೆ ಬಹಳಷ್ಟು ಜನರಲ್ಲಿರುವ ಮಬ್ಬುತನದಿಂದಾಗಿ ಅವರು ಆ ದೈವೀಪ್ರೇಮವನ್ನು ಗ್ರಹಿಸಲು ತಡೆಯುಂಟಾಗುತ್ತದೆ."

ಅದರ ಬಗ್ಗೆ ನಾನು ಹೇಳಿದ್ದೆ. ನಂತರ ಇದೀಗ ನಾನು ಹೇಳಿದ ಆ ಅನುಭವ ಬಂದಿತು.

"ದೈವೀಸತ್ಯ ಅದ್ಭುತವಾಗಿದೆ. ನಮ್ಮ ಗ್ರಹಿಕೆಯಲ್ಲಿ ಅದು ವಿರೂಪಕ್ಕೊಳಗಾಗಿರುತ್ತದೆ."

ಹೌದು, ಅದು ಒಮ್ಮಿಂದೊಮ್ಮೆಗೆ ಸಂಭವಿಸಿದ ಹಾಗಿತ್ತು. ಕೆಲವು ನಿಮಿಷಗಳ ಕಾಲ ನಾನು ಜಗತ್ತನ್ನು ಭಗವಂತ ನೋಡಿದ ಹಾಗೆ ನೋಡಿದೆ. ಅದನ್ನು ಕುರಿತು ಹೇಳಲು ಶಬ್ದಗಳಿಲ್ಲ, ಅದು ಅನಿರ್ವಚನೀಯವಾದದ್ದು. ಆಗ ನಾನು ಅರ್ಥ ಮಾಡಿಕೊಂಡೆ. ಎಲ್ಲವೂ ಸಂಪೂರ್ಣವಾಗಿ ಸ್ಪಷ್ಟವಾಯಿತು.

ನಿನಗೆ ನೆನಪಿರಬಹುದು. ವ್ಯಕ್ತಿಗತ ಪ್ರಜ್ಞೆ ದೈವೀಪ್ರಜ್ಞೆಯ ಅನುಭವ ಪಡೆಯಲಿ ಎಂದು ಭಗವಂತ ಬಯಸಿದ್ದ. ಸರಿ, ನನ್ನ ಅನುಭವ ಅದಾಗಿತ್ತು. ಅದು ವ್ಯಕ್ತಿಗತವಾದ (ಏಕೆಂದರೆ ನಾನು ಅದರ ಅರಿವನ್ನು ತಂದುಕೊಂಡೆ) ಪ್ರಜ್ಞೆ ಜಗತ್ತನ್ನು ನೋಡುವುದಾಗಿತ್ತು. ಒಮ್ಮಿಂದೊಮ್ಮೆಗೆ ಜಗತ್ತು ಭಗವಂತನಿಗೆ ಏನಾಗಿದೆಯೋ ಅಂತಹದಾಯಿತು... ಅದು ವರ್ಣನಾತೀತವಾದದ್ದು.

ಸ್ಪಷ್ಟವಾಗಿ ಅದು ಪ್ರಜ್ಞೆಯಿಂದ ಪ್ರಾರಂಭವಾಗಬೇಕು. ಮತ್ತು ನಂತರ ಸ್ವಲ್ಪ,

ಸ್ವಲ್ಪವಾಗಿ ವಿಷಯಗಳು ಆ ರೀತಿಯವಾಗುತ್ತವೆ, ಅದರರ್ಥ ಭಗವಂತ ಅವುಗಳ ಬಗ್ಗೆ ಹೊಂದಿರುವ ಅರಿವನ್ನು ಅವು ಪಡೆಯುತ್ತವೆ.

(Vol. 12, p. 308)

**ಡಿಸೆಂಬರ 8, 1971**

ಕಾರ್ಯ ಸತತ ನಡೆಯುತ್ತಿದೆ. ನನ್ನ ದೇಹವನ್ನು, ಜೋಡಿಸುವ ಬಿಂದುವಿನ ರೂಪದಲ್ಲಿ, ಆ ರೀತಿಯಾಗಿ ಉಪಯೋಗಿಸಲಾಗುತ್ತಿದೆ ಎಂಬುದನ್ನು ಈಗ ನೋಡುತ್ತಿದ್ದೇನೆ. ಆದರೆ ದೇಹಕ್ಕೆ ಅದರ ಅರಿವು ಎಂದಿಗೂ ಆಗುವುದಿಲ್ಲ. ಏಕೆಂದರೆ ಆ ಕ್ರಿಯೆ ಬಹಳ ವಿಶಾಲವಾಗಿದೆ ಹಾಗೂ ಸಂಕೀರ್ಣವಾಗಿದೆ. – ಮತ್ತು ಪ್ರಜ್ಞೆ ಎಲ್ಲ ವಿವರಗಳ ಬಗ್ಗೆ ಅರಿವು ಹೊಂದಿಲ್ಲ: ದೈವೀಶಕ್ತಿಯ ಕಾರ್ಯಗತಿಯನ್ನು ಮಾತ್ರ ಭಾವನೆಗೆ ತಂದುಕೊಳ್ಳುತ್ತಿದೆ, ಅಷ್ಟೆ. ಅದು ಹಗಲು ರಾತ್ರಿ, ಸತತ, ತಡೆಗೊಳಗಾಗದೆ ನಡೆಯುತ್ತದೆ.

ನನ್ನ ರಾತ್ರಿಗಳನ್ನು ಕುರಿತು ಹೇಳುವುದಾದರೆ ನಾನು ನಿದ್ದೆ ಮಾಡುತ್ತಿರುವ ಭಾವನೆ ಇರುವುದಿಲ್ಲ, ಆದರೆ ವೇಳೆ ಕಳೆದು ಹೋದದ್ದು ನನ್ನ ಗಮನಕ್ಕೆ ಬರುವುದಿಲ್ಲ. ಕೇವಲ ದೈವೀಶಕ್ತಿಗಳು ಹಾಯ್ದು ಹೋಗುತ್ತಿರುವುದರ ಭಾವನೆ ಇರುತ್ತದೆ. ಆ ಶಕ್ತಿಗಳು ಏನು ಕೈಕೊಳ್ಳುತ್ತವೆ ಎಂಬುದು ನನಗೆ ತಿಳಿಯದು, – ಆದರೆ ಅವು ನನ್ನ ಮೂಲಕ ಸಾಗಿ ಹೋಗುತ್ತವೆ ಮತ್ತು ಅಲ್ಲಿ, ಇಲ್ಲಿ ಕೇಂದ್ರೀಕೃತವಾಗಿರುತ್ತವೆ. ಆದರೆ ನನ್ನಲ್ಲಿ ಕುತೂಹಲವಿಲ್ಲ, ಬಹಳ ಅಚಂಚಲಳಾಗಿರುವ ಭಾವನೆ ಇದೆ, ಅದರಿಂದಾಗಿ ಆ ವಿಧಾನ ಅಡೆತಡೆಯಿಲ್ಲದೆ ಮುಂದುವರಿಯುತ್ತದೆ, ಹಾಗಾಗಿ ಕಾರ್ಯನಿರತವಾಗಿರುವ ದೈವೀಶಕ್ತಿಗಳು ಹಾಯ್ದು ಹೋಗುವುದಕ್ಕೆ ಯಾವುದೂ ಅಡೆತಡೆ ಒಡ್ಡುವುದಿಲ್ಲ.

ಗಂಟೆಯ ನಂತರದ ಗಂಟೆಯ ಕಾಲ, ದಿನದ ನಂತರದ ದಿನದ ಕಾಲ ಅದು ಹಾಗೆಯೇ ಇರುತ್ತದೆ. ಗಮನಕ್ಕೆ ಬಾರದೆ ಕಾಲ ಕಳೆದು ಹೋಗುತ್ತದೆ. ದೀರ್ಘವಾದದ್ದಲ್ಲ. ...

(ಶ್ರೀಮಾತೆಯವರು ತಮ್ಮೊಳಗೆ ಆಳದಲ್ಲಿ ಇಳಿದು ಹೋಗುತ್ತಾರೆ)

(Vol. 12, p. 324)

**ಮಾರ್ಚ 25, 1972**

**ಸತ್ಪ್ರೇಮ :** *ಸಂಕ್ರಮಣದ ಸ್ಥಿತಿಯಲ್ಲಿರುವ ನಿಮ್ಮ ದೇಹ ಕುರಿತು ಆ ಇನ್ನೊಂದು ದಿನ ನಿಮಗಾದ ದರ್ಶನ ಕುರಿತು ಸುಜಾತಾ ನನಗೆ ಹೇಳಿದಳು.*



**ಶ್ರೀಮಾತೆ :** ಹೌದು, ನಾನು ಆ ರೀತಿ ಇದ್ದೆ. ಅದು ನಾನೇ ಆಗಿದ್ದೆ. ನನ್ನನ್ನು ನಾನು ಕನ್ನಡಿಯಲ್ಲಿ ನೋಡಿಕೊಳ್ಳಲಿಲ್ಲ. (ಶ್ರೀಮಾತೆಯವರು ತಲೆಯನ್ನು ಮುಂದೆ ಬಾಗಿಸಿ ತಮ್ಮ ದೇಹದತ್ತ ನೋಡುತ್ತಾರೆ), ನನ್ನನ್ನು ಈ ರೀತಿ ನೋಡಿದೆ. ನಾನು ಖಚಿತವಾಗಿ ಹಾಗಿದ್ದೆ.

ಅದು ಮೊದಲನೆಯ ಸಲ. ಆಗ ಬೆಳಗಿನ ನಾಲ್ಕು ಗಂಟೆಯ ಸಮಯವಾಗಿರಬಹುದು ಎಂದೆನಿಸುತ್ತದೆ. ಆ ದರ್ಶನ ಪರಿಪೂರ್ಣವಾಗಿ ಸ್ವಾಭಾವಿಕವಾಗಿತ್ತು. – ಎಂದರೆ ನಾನು ನನ್ನನ್ನು ಕನ್ನಡಿಯಲ್ಲಿ ನೋಡಲಿಲ್ಲ, ಅದರ ಬಗ್ಗೆ ಸ್ವಾಭಾವಿಕವಾಗಿರುವ ಭಾವನೆ ಬಂದಿತು. (ಎದೆಯ ಮಟ್ಟದಿಂದ ಸೊಂಟದ ವರೆಗೆ) ನಾನು ನೋಡಿದ್ದು ನನ್ನ ನೆನಪಿಗೆ ಬರುತ್ತಿದೆ. ನನ್ನನ್ನು ಕೇವಲ ಪರದೆಗಳು ಆವರಿಸಿಕೊಂಡಿದ್ದವು, ಹಾಗಾಗಿ ನಾನು ಕೇವಲ ನೋಡಿದೆ. ... ಬಹಳ ಭಿನ್ನವಾಗಿ ಕಂಡುಬಂದದ್ದು ಕೈಕಾಲುಗಳನ್ನು ಹೊರತುಪಡಿಸಿ ಇರುವ ದೇಹದ ಭಾಗ(torso), ಎದೆಯ ಮಟ್ಟದಿಂದ ಟೊಂಕದವರೆಗೆ: ಅದು ಪುರುಷನದಿರುವ ಹಾಗೂ ಇರಲಿಲ್ಲ, ಮಹಿಳೆಯದಿರುವ ಹಾಗೂ ಇರಲಿಲ್ಲ.

ಆದರೆ ಅದು ಮನೋಹರವಾಗಿತ್ತು, ನನ್ನ ಆಕಾರ ಅತ್ಯಂತ ಬಳಕುವಂತಹದಾಗಿತ್ತು ಮತ್ತು ಲಘು ಸುಂದರ ಮೈಕಟ್ಟಿನದಾಗಿತ್ತು, ತೆಳ್ಳಗಾಗಿರಲಿಲ್ಲ. ಚರ್ಮ ನನ್ನದಿದ್ದ ಹಾಗೆ ಇದ್ದು ಹೆಚ್ಚು ಬೆಳ್ಳಗಾಗಿತ್ತು. ಮನೋಹರವಾದ ರೂಪ. ಲಿಂಗ ಲಕ್ಷಣವಿರಲಿಲ್ಲ. – ನನ್ನ ದೇಹ ಗಂಡಸಿನದೋ ಅಥವಾ ಹೆಂಗಸಿನದೋ ಎಂದು ಹೇಳುವಂತಿರಲಿಲ್ಲ. ಲಿಂಗಲಕ್ಷಣ ಮಾಯವಾಗಿತ್ತು.

(ಶ್ರೀಮಾತೆಯವರು ತಮ್ಮ ಎದೆಯನ್ನು ತೋರಿಸಿ) ಇಲ್ಲಿಯೂ ಕೂಡ ಹಾಗೆಯೇ ಇತ್ತು, ಅದೆಲ್ಲ ಚಪ್ಪಟೆಯಾಗಿತ್ತು, ಅದನ್ನು ಹೇಗೆ ವಿವರಿಸಬೇಕೆಂಬುದು ನನಗೆ ತಿಳಿಯದು. ಈಗಿದ್ದುದನ್ನು ನೆನಪಿಗೆ ತರುವ ಬಾಹ್ಯ ರೇಖೆಯಿತ್ತು, ಆದರೆ ರೂಪರಹಿತವಾಗಿತ್ತು. (ಶ್ರೀಮಾತೆಯವರು ಎದೆಯನ್ನು ಮುಟ್ಟಿ ತೋರಿಸುತ್ತಾರೆ), ಪುರುಷನದಷ್ಟೂ ಇರಲಿಲ್ಲ. ಹೆಚ್ಚು ಬಿಳಿ ಬಣ್ಣದ್ದೆನಿಸುವ ಚರ್ಮ, ಬಹಳ ಮೃದುವಾದದ್ದು. ಬಹುಮಟ್ಟಿಗೆ ಉದರವೆಂಬುದಿರಲಿಲ್ಲ, ಹೊಟ್ಟೆ ಇರಲಿಲ್ಲ, ಅದೆಲ್ಲವೂ ಲಘು ಸುಂದರ ಮೈಕಟ್ಟಿನದಾಗಿತ್ತು.

ನಾನು ಅದರತ್ತ ವಿಶೇಷ ಲಕ್ಷ್ಯಕೊಡಲಿಲ್ಲ, ತಿಳಿಯಿತೆ? ಏಕೆಂದರೆ ನಾನು ಅದಾಗಿದ್ದೆ. ಅದು ನನಗೆ ಬಹಳ ಸ್ವಾಭಾವಿಕವಾದದ್ದೆನಿಸಿತು. ಅದು ಮೊನ್ನೆಯದಿನ

ರಾತ್ರಿ ಮೊದಲ ಸಲ ಸಂಭವಿಸಿತು. ಆದರೆ ನಿನ್ನೆ ರಾತ್ರಿ ಅಂತಹದೇನೂ ಕಂಡುಬರಲಿಲ್ಲ. ಇಲ್ಲಿಯವರೆಗೆ ಅದು ಸಂಭವಿಸಿದ್ದು ಮೊದಲನೆಯ ಸಲ ಹಾಗೆಯೇ ಕೊನೆಯ ಸಲವೂ ಆಗಿತ್ತು.

**ಸತ್ಪ್ರೇಮ :** *ಆದರೆ ಈ ರೂಪ ಸೂಕ್ಷ್ಮ ಭೌತಿಕದಲ್ಲಿತ್ತಲ್ಲವೆ?*

**ಶ್ರೀಮಾತೆ :** ಅದು ಸೂಕ್ಷ್ಮ ಭೌತಿಕದಲ್ಲಿ ಹಾಗಿರಲೇಬೇಕು.

**ಸತ್ಪ್ರೇಮ :** *ಆದರೆ ಅದು ಭೌತಿಕದಲ್ಲಿ ಹೇಗೆ ಸಾಗಿ ಹೋಗುವುದು?*

**ಶ್ರೀಮಾತೆ :** ಇರುವ ಪ್ರಶ್ನೆ ಅದೇ ಆಗಿದೆ. ನನಗೆ ಅದು ತಿಳಿದಿಲ್ಲ. ಹಾಗೆಯೇ ನಮಗೆ ಈಗ ಇರುವ ಜೀರ್ಣಿಸಬೇಕಾದ ಸಂಕೀರ್ಣ ಕ್ರಿಯೆಯಾಗಲಿ, ವಿಸರ್ಜನೆಯ ಕ್ರಿಯೆಯಾಗಲಿ ಇರಲಿಲ್ಲ, ಅದು ಆ ರೀತಿ ಕಾರ್ಯ ಮಾಡುವುದಿಲ್ಲ.

ಆದರೆ ಹೇಗೆ? ಆಹಾರ ಈಗಾಗಲೆ ಬಹಳ ಭಿನ್ನವಾಗಿರುತ್ತದೆ ಮತ್ತು ಹೆಚ್ಚು ಹೆಚ್ಚಾಗಿ ಭಿನ್ನವಾಗುತ್ತದೆ... ಉದಾಹರಣೆಗೆ ಗ್ಲುಕೋಜ ಇಲ್ಲವೆ ವಿಸ್ತಾರವಾಗಿ ಜೀರ್ಣಿಸುವ ಆವಶ್ಯಕತೆಯನ್ನುಂಟು ಮಾಡದ ಪದಾರ್ಥಗಳು. ಆದರೆ ದೇಹವೇ ಸ್ವತಃ ಹೇಗೆ ಬದಲಾಗುವುದು? ... ಅದು ನನಗೆ ತಿಳಿದಿಲ್ಲ.

ದೇಹ ಹೇಗೆ ಕಾರ್ಯ ಮಾಡುತ್ತಿತ್ತೆಂಬುದನ್ನು ನಾನು ಗಮನಿಸಲಿಲ್ಲ, ಏಕೆಂದರೆ ಅದು ಸಂಪೂರ್ಣವಾಗಿ ನನಗೆ ಸ್ವಾಭಾವಿಕವಾಗಿತ್ತು. ಹಾಗಾಗಿ ನಾನು ಅದನ್ನು ವಿವರವಾಗಿ ವರ್ಣಿಸುವುದು ಸಾಧ್ಯವಾಗುವುದಿಲ್ಲ. ಅದು ಪುರುಷನ ದೇಹವೂ ಆಗಿರಲಿಲ್ಲ, ಮಹಿಳೆಯ ದೇಹವೂ ಆಗಿರಲಿಲ್ಲ, – ಅಷ್ಟು ಮಾತ್ರ ನಿಶ್ಚಿತವಾದದ್ದು. ರೂಪರೇಖೆ ತರುಣ ವಯಸ್ಸಿನ ವ್ಯಕ್ತಿಯದಿರುವ ಹಾಗಿತ್ತು, ಮಾನವ ರೂಪದ ಅಸ್ಪಷ್ಟ ಸೂಚನೆಯಿತ್ತು (ಶ್ರೀಮಾತೆಯವರು ಗಾಳಿಯಲ್ಲಿ ಒಂದು ಆಕೃತಿಯನ್ನು ರಚಿಸಿ ತೋರಿಸುತ್ತಾರೆ.), ಭುಜ ಹಾಗೂ ಟೊಂಕಗಳಿದ್ದವು. ಅದೆಲ್ಲ ಕೇವಲ ಒಂದು ಸುಳಿವು ನೀಡುತ್ತಿರುವ ಹಾಗಿತ್ತು.

ನೀನು ನಿನ್ನನ್ನು ನೋಡುತ್ತಿರುವ ಹಾಗೆ, ನಿಖರವಾಗಿ, ನನ್ನನ್ನು ನಾನು ನೋಡಿದೆ. ಕನ್ನಡಿಯಲ್ಲಿ ನನ್ನನ್ನು ನೋಡಲಿಲ್ಲ. ನನ್ನ ಮೈಮೇಲೆ ಒಂದು ಪರದೆಯಿತ್ತು. ಅದನ್ನು ನನ್ನ ಮೈಮುಚ್ಚಿಕೊಳ್ಳುವುದಕ್ಕಾಗಿ ಧರಿಸಿದ್ದೆ.

ಅದು ನಾನಿರುವ ಸ್ವಾಭಾವಿಕ ರೀತಿಯದಾಗಿತ್ತು. (ಅದರಲ್ಲಿ ಆಶ್ಚರ್ಯ–ಪಡುವಂತಹದೇನೂ ಇರಲಿಲ್ಲ.)

ಅದು ಸೂಕ್ಷ್ಮ ಭೌತಿಕದಲ್ಲಿ ಹಾಗಿರಲೇಬೇಕು.



**ಸತ್ಪ್ರೇಮ :** *ಆದರೆ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗಾಗುವ ಸಂಕ್ರಮಣ ರಹಸ್ಯಮಯವಾಗಿರುವಂತಿದೆ.*

**ಶ್ರೀಮಾತೆ :** ಹೌದು – ಹೇಗೆ?

ಆದರೆ ಅದು ಚಿಂಪಾಂಝಿ ಸ್ಥಿತಿಯಿಂದ ಮಾನವನ ಸ್ಥಿತಿಗಾಗುವ ಸಂಕ್ರಮಣದ ಹಾಗಿರುತ್ತದೆ.

**ಸತ್ಪ್ರೇಮ :** *ಓಹ್, ಇಲ್ಲ, ಶ್ರೀಮಾತೆಯವರೆ, ಆ ಸಂಕ್ರಮಣ ಅದಕ್ಕಿಂತ ಹೆಚ್ಚು ಬೃಹತ್ ಪ್ರಮಾಣದ್ದು, ಏಕೆಂದರೆ, ಒಟ್ಟಿನಲ್ಲಿ, ಚಿಂಪಾಂಝಿ* ಮತ್ತು ಮನುಷ್ಯ *ಇವರಲ್ಲಿ ಬಹಳ ಭೇದವಿಲ್ಲ.*

**ಶ್ರೀಮಾತೆ :** ಆದರೆ ತೋರಿಕೆಯಲ್ಲಿ ಅಷ್ಟೊಂದು ವ್ಯತ್ಯಾಸ ಕೂಡ ಇರಲಿಲ್ಲ. (ಶ್ರೀಮಾತೆಯವರು ಗಾಳಿಯಲ್ಲಿ ರೂಪವೊಂದರ ಆಕಾರ ರಚಿಸಿ ತೋರಿಸುತ್ತಾರೆ). ಅಲ್ಲಿ ಭುಜಗಳಿದ್ದವು, ತೋಳುಗಳು, ಕಾಲುಗಳು, ದೇಹ, ಟೊಂಕ ಇವೆಲ್ಲ ಇದ್ದವು, ಅವು ನಮ್ಮದಾಗಿರುವ ರೀತಿಯವೇ ಆಗಿದ್ದವು.

**ಸತ್ಪ್ರೇಮ :** ಹೌದು, ಆದರೆ *ಚಿಂಪಾಝಿ* ಮತ್ತು ಮನುಷ್ಯ ಇವರ *ಕಾರ್ಯವಿಧಾನಗಳು ಒಂದೇ ರೀತಿಯದಾಗಿರುತ್ತವೆ.*

**ಶ್ರೀಮಾತೆ :** ಹೌದು, ಅವು ಒಂದೇ ರೀತಿಯದಾಗಿರುತ್ತವೆ.

**ಸತ್ಪ್ರೇಮ :** *ಸರಿ, ಅಲ್ಲಿ ಜೀರ್ಣಿಸಿಕೊಳ್ಳುವ ರೀತಿ, ಉಸಿರಾಡಿಸುವ ರೀತಿ ಒಂದೇ ಆಗಿರುತ್ತದೆ.* ಅದು ಹಾಗಿರುವಾಗ ಇಲ್ಲಿ ......

**ಶ್ರೀಮಾತೆ :** ಇಲ್ಲ, ಇಲ್ಲಿಯೂ ಕೂಡ ಉಸಿರಾಡಿಸುವಿಕೆ ಇದ್ದಿರಲೇಬೇಕು. ತದ್ವಿರುದ್ಧವಾಗಿ ಭುಜಗಳು ಎದ್ದು ಕಾಣುವಂತೆ ವಿಶಾಲವಾಗಿದ್ದವು (ಸಂಜ್ಞೆ ಮಾಡುತ್ತಾರೆ) ಅದು ಮಹತ್ವದ್ದು. ಆದರೆ ಎದೆ ಪುರುಷನದಿರುವ ಹಾಗಿರಲಿಲ್ಲ, ಮಹಿಳೆಯದಿರುವ ಹಾಗೆಯೂ ಇರಲಿಲ್ಲ. ಕೇವಲ ಅದನ್ನು ನೆನಪಿಗೆ ತಂದುಕೊಡುವಂತಹದಿತ್ತು. ಹೊಟ್ಟೆ, ಕಿಬ್ಬೊಟ್ಟೆ ಇತ್ಯಾದಿಗಳು ಕೇವಲ ಬಾಹ್ಯರೇಖೆಯ ರೂಪದಲ್ಲಿದ್ದವು, ಸಣಕಲಾಗಿ ಸಾಮರಸ್ಯದಿಂದ ಇದ್ದವು, ನಮ್ಮ ದೇಹದಲ್ಲಿ ಈಗ ಉಪಯೋಗಿಸುವ ರೀತಿಯಲ್ಲಿ ಅವು ನಿಶ್ಚಿತವಾಗಿ ಇರಲಿಲ್ಲ.

ಎರಡು ಭಿನ್ನ ವಿಷಯಗಳು – ಇಡಿಯಾಗಿ ಭಿನ್ನವಾದವುಗಳು – ಇನ್ನು ಮುಂದೆ ಮೊದಲಿನ ಹಾಗೆ ಇರುವುದು ಸಾಧ್ಯವಿಲ್ಲ, ಭೌತಿಕವಾಗಿ ಜನ್ಮ ನೀಡುವುದು

ಅಂತಹ ವಿಷಯಗಳಲ್ಲೊಂದು, ಇನ್ನೊಂದು ಆಹಾರ ಕುರಿತಾಗಿದ್ದು. ನಮ್ಮ ಸದ್ಯದ ಆಹಾರವೂ ಕೂಡ ಚಿಂಪಾಂಝಿಯ ಇಲ್ಲವೆ ಆದಿಮಾನವರ ಆಹಾರದ ಹಾಗಿಲ್ಲ, ಅದು ಬಹಳ ಭಿನ್ನವಾಗಿದೆ. ಹಾಗಾಗಿ ಈಗ ಈ ಎಲ್ಲ ಜೀರ್ಣಿಸಿಕೊಳ್ಳುವ ಆವಶ್ಯಕತೆಯಿಲ್ಲದ ಆಹಾರವನ್ನು ಕಂಡುಹಿಡಿಯಬೇಕಾಗಿದೆ. ಅದು ನಿಖರವಾಗಿ ದ್ರವರೂಪದ್ದಲ್ಲ, ಆದರೆ ಘನರೂಪದ್ದೂ ಕೂಡ ಅಲ್ಲ ಮತ್ತು ಬಾಯಿ ಹೇಗಿರಬೇಕೆಂಬ ಪ್ರಶ್ನೆಯೂ ಇದೆ. – ನನಗೆ ಅದರ ಬಗ್ಗೆ ತಿಳಿದಿಲ್ಲ – ಮತ್ತು ಹಲ್ಲುಗಳು? ಸ್ವಾಭಾವಿಕವಾಗಿ ಇನ್ನು ಮುಂದೆ ನುರಿಸಿ ತಿನ್ನುವ ಆವಶ್ಯಕತೆ ಇರುವುದಿಲ್ಲ, ಹಾಗಾಗಿ ಹಲ್ಲುಗಳಿರುವ ಆವಶ್ಯಕತೆ ಇಲ್ಲ.... ಆದರೆ ಅವುಗಳ ಸ್ಥಾನದಲ್ಲಿ ಏನಾದರೂ ಇರಬೇಕು. ಮುಖ ಹೇಗೆ ಕಾಣಿಸುತ್ತಿತ್ತೆಂಬ ವಿಚಾರದ ಬಗ್ಗೆ ನನಗೆ ಕಿಂಚಿತ್ತೂ ತಿಳಿದಿಲ್ಲ. ಆದರೆ ಅದೂ ಕೂಡ ಈಗ ಇರುವುದಕ್ಕಿಂತ ಬಹಳ ಭಿನ್ನವಾಗಿರುವಂತೆ ತೋರಿಬರಲಿಲ್ಲ.

ಮಹತ್ವದ ಪಾತ್ರ ವಹಿಸಿದ ಉಸಿರಾಡಿಸುವಿಕೆ ಬಹಳಷ್ಟು ಬದಲಾವಣೆ–ಗೊಳಗಾಗುವುದು. ಆ ಸತ್ತೆ ಅದರ ಮೇಲೆ ಬಹಳಷ್ಟು ಅವಲಂಬಿಸಿತ್ತು.

**ಸತ್ಪ್ರೇಮ :** *ಹೌದು, ಆ ಸತ್ತೆ ಚೈತನ್ಯಗಳನ್ನು ನೇರವಾಗಿ ಹೀರಿಕೊಳ್ಳಬಹುದು.*

**ಶ್ರೀಮಾತೆ :** ಹೌದು, ಬಹುಶಃ ಮಧ್ಯೆ ಕಾಣಿಸಿಕೊಳ್ಳುವ ಸತ್ತೆಗಳು ಬರಬಹುದು, ಅವರು ಕೊನೆಗೊಳ್ಳದೆ ಉಳಿದುಕೊಳ್ಳುವವರಲ್ಲ. ಅದು ಚಿಂಪಾಂಝಿ ಮತ್ತು ಮನುಷ್ಯ ಇವರ ನಡುವೆ ಕಾಣಿಸಿಕೊಂಡ ಸತ್ತೆಗಳ ಹಾಗಿರಬಹುದು. ಆದರೆ ಅದು ನನಗೆ ತಿಳಿಯದು.

ಇಲ್ಲಿಯವರೆಗೆ ಸಂಭವಿಸಿರದ ಏನೋ ಒಂದು ಆಗಲೇಬೇಕು.

**ಸತ್ಪ್ರೇಮ :** *ಹೌದು.*

(ಮೌನ)

**ಸತ್ಪ್ರೇಮ :** *ಸಿದ್ಧಿ ಪಡೆಯುವ ದಿನ ಬಹಳ ಹತ್ತಿರವಿದೆ ಎಂಬ ಒಂದು ಬಗೆಯ ಭಾವನೆ ನನಗೆ ಕೆಲವೊಮ್ಮೆ ಬರುತ್ತದೆ.*

**ಶ್ರೀಮಾತೆ :** ಹೌದು, ಆದರೆ ಹೇಗೆ?

**ಸತ್ಪ್ರೇಮ :** *ಹೌದು, ಹೇಗೆ? – ಅದು ನಮಗೆ ತಿಳಿದಿಲ್ಲ.*

**ಶ್ರೀಮಾತೆ :** (ತಮ್ಮ ದೇಹದತ್ತ ಬೆರಳು ಮಾಡಿ) ಇದು ಬದಲಾಗುವುದೆ? ಅದು



ಬದಲಾಗಬೇಕು ಇಲ್ಲವೆ ಬಂದದ್ದು ಹಳೆಯ ಸರ್ವಸಾಧಾರಣ ಮಾದರಿಯಲ್ಲಿ ಕೊನೆಗೊಳ್ಳಬೇಕು. ನಂತರ ಮರಳಿ ಜನ್ಮ ತಾಳಬೇಕು. ನನಗೆ ಅದು ತಿಳಿದಿಲ್ಲ.

**ಸತ್ಪ್ರೇಮ :** *ಪರಿವರ್ತನೆಯ ಬದಲಾಗಿ ಇನ್ನೊಂದು ದೇಹ ಮೂರ್ತರೂಪ ತಾಳುವುದೆಂಬ ಭಾವನೆ ನನಗೆ ಹಲವಾರು ಸಲ ಬಂದಿದೆ.*

**ಶ್ರೀಮಾತೆ :** ಹೌದು, ಆದರೆ ಹೇಗೆ?

**ಸತ್ಪ್ರೇಮ :** *ಹೇಗೆ ಎಂಬುದು ನನಗೆ ತಿಳಿದಿಲ್ಲ.*

(ಸ್ವಲ್ಪ ಮೌನದ ನಂತರ)

**ಶ್ರೀಮಾತೆ :** ಹೌದು, ಆದರೆ ಹೇಗೆ? ಅರ್ಥಮಾಡಿಕೊಳ್ಳಬಹುದಾದ ಹಾಗೆ ಎರಡು ರಾತ್ರಿಗಳ ಹಿಂದೆ ನನ್ನಲ್ಲಿದ್ದ ದೇಹ ಭೌತಿಕರೂಪ ತಾಳಬಲ್ಲದುದಾದರೆ.– ಆದರೆ ಹೇಗೆ? ನಿನಗೆ ಧ್ಯಾನ ಮಾಡುವ ಬಯಕೆ ಇದೆಯೆ?

(ಶ್ರೀಮಾತೆಯವರು ಧ್ಯಾನಮಗ್ನರಾಗುತ್ತಾರೆ)

ನಮಗೇನೂ ತಿಳಿದಿಲ್ಲ. ನಾವು ಹೇಗೆ ಏನನ್ನೂ ಅರಿತುಕೊಂಡಿಲ್ಲ ಎಂಬುದು ಅಶ್ಚರ್ಯಕರವಾಗಿದೆ.

(ಸತ್ಪ್ರೇಮ ಹೊರಡಲು ತಯಾರಿ ಮಾಡಿಕೊಳ್ಳುತ್ತಿದ್ದಾನೆ. ಸುಜಾತ ಶ್ರೀಮಾತೆಯವರ ಬಳಿ ಬರುತ್ತಾಳೆ)

**ಸುಜಾತಾ :** *ಶ್ರೀ ಮಾತೆಯವರೆ, 'ಪರಿವರ್ತನೆ' ಶೀರ್ಷಿಕೆ ಇರುವ ಶ್ರೀ ಅರವಿಂದರ ಕವನದಲ್ಲಿ ಪ್ರಾರಂಭದ ಸಾಲುಗಳು*

*"ನನ್ನುಸಿರು ಸೂಕ್ಷ್ಮ ಲಯಬದ್ಧ ಪ್ರವಾಹದಲಿ ಓಡುತಿದೆ*
*ದೈವೀ ಸರ್ವಶಕ್ತಿಯಿಂದ ಅದು ನನ್ನ ಅಂಗಗಳನು ತುಂಬುತಿದೆ"*

*ಇವೆ ಎಂಬುದು ನಿಮಗೆ ಗೊತ್ತಿದೆ ಅಲ್ಲವೆ ?*

**ಶ್ರೀಮಾತೆ :** ಉಸಿರಾಡಿಸುವುದು, ಹೌದು, ಅದು ಮಹತ್ವದ್ದು. "ದೈವೀ ಸರ್ವಶಕ್ತಿ"

**ಸುಜಾತಾ :** *ಶ್ರೀಮಾತೆಯವರೆ ಅದು "ದೈವೀ ಸರ್ವಶಕ್ತಿ"ಯಾಗಿರುವುದು ನಿಜ.*

(ಶ್ರೀ ಮಾತೆಯವರು ಸುಜಾತಾಳ ಕೆನ್ನೆಗಳನ್ನು ನೇವರಿಸುತ್ತಾರೆ.)

(Vol. 13, p. 98)

**ಮಾರ್ಚ 30, 1972**

**ಸತ್ಪ್ರೇಮ :** *ಶ್ರೀ ಮಾತೆಯವರೆ, ಸದ್ಯ ನಿಮ್ಮ ಶಕ್ತಿ ಅತ್ಯಂತ ಕ್ರಿಯಾಶೀಲವಾಗಿದೆ, ಅದು ನಿಮಗೆ ತಿಳಿದಿದೆ.*

**ಶ್ರೀಮಾತೆ :** ಹೌದು ನನಗೆ ತಿಳಿದಿದೆ. ನಾನು ಈಗಿರುವ ಹಾಗಿದ್ದಾಗ, ಯಾವಾಗಲೂ, ದೈವೀಶಕ್ತಿಯನ್ನು ನೋಡುತ್ತೇನೆ – ಅದು ನನ್ನ ಶಕ್ತಿಯಲ್ಲ, ಭಗವಂತನದು. (ಒಂದು ವಾಹಿನಿಯಾಗಿರುವ ಸಂಜ್ಞೆ ಮಾಡುತ್ತಾರೆ) ನಾನು ಕೇವಲ ಈ ರೀತಿ ವಾಹಿನಿಯಾಗಿರುತ್ತೇನೆ. ಈ ದೇಹ, ಸರಳವಾಗಿ, ಸಂವಾಹಕ ಯಂತ್ರ (transmitter) ಆಗಿದೆ, ಸಾಧ್ಯವಿದ್ದಷ್ಟು ಪಾರದರ್ಶಕ ಹಾಗೂ ಅವೈಯಕ್ತಿಕವಾಗಿದೆ. ಹಾಗಾಗಿ ಭಗವಂತ ಬಯಸಿದ್ದನ್ನು (ಈ ದೇಹದ ಮೂಲಕ) ಕೈಕೊಳ್ಳಲು ಶಕ್ತನಾಗುತ್ತಾನೆ.

(ಮೌನ)

**ಸತ್ಪ್ರೇಮ :** *ಅದು ಬಹಳ ಪಾರದರ್ಶಕವಾಗಿದೆ, ಏಕೆಂದರೆ ಏನನ್ನಾದರೂ ನಿಮ್ಮ ಮುಂದಿರಿಸಿದ ತಕ್ಷಣ, ಆ ಕಾರ್ಯ ಕೂಡಲೆ ಕೈಗೂಡುತ್ತದೆ.*

(ಮೌನ)

**ಶ್ರೀಮಾತೆ :** ನಾನಿಲ್ಲಿಗೆ ಮೊದಲ ಸಲ ಬಂದು ನಿನ್ನೆಗೆ ಐವತ್ತೆಂಟು ವರ್ಷಗಳಾದವು. ಈ ಐವತ್ತೆಂಟು ವರ್ಷಗಳ ಕಾಲ ನಾನು ಅದಕ್ಕಾಗಿ (FOR THAT) ಈ ದೇಹ ಸಾಧ್ಯವಿದ್ದಷ್ಟು ಪಾರದರ್ಶಕವಾಗಲಿ, ಅಭೌತಿಕವಾದದ್ದಾಗಲಿ ಎಂಬುದಕ್ಕಾಗಿ ಕಾರ್ಯ ಮಾಡುತ್ತಿದ್ದೆ. ಅದರಿಂದಾಗಿ ಅವತರಣ ಮಾಡಿ ಬರುತ್ತಿರುವ ದೈವೀಶಕ್ತಿಗೆ ಅಡೆತಡೆ ಉಂಟಾಗುವುದಿಲ್ಲ.

ಈಗ ದೇಹವೇ ಸ್ವತಃ ಇದು ತನ್ನ ಎಲ್ಲ ಜೀವಕೋಶಗಳಲ್ಲಿ ಇರಲೆಂದು ಬಯಸುತ್ತದೆ. ಜೀವನದಲ್ಲಿ ಅದೇ ಒಂದು ಉದ್ದೇಶವಿದೆ.

ಪೃಥ್ವಿಯ ಮೇಲೆ ಒಂದು ಸಂಪೂರ್ಣವಾಗಿ ಪಾರದರ್ಶಕವಾದ, ಬೆಳಕು ಹಾದುಹೋಗುವಂತೆ ಮಾಡುವ ಅಂಶವನ್ನು ಸೃಷ್ಟಿಸಲು ಪ್ರಯತ್ನಿಸಬೇಕಾಗಿದೆ, ಅದು ದೈವೀಶಕ್ತಿ, ತನ್ನ ಮೂಲಕ ಯಾವುದೇ ಬಗೆಯಲ್ಲಿ ವಿರೂಪಗೊಳ್ಳದೆ, ಹಾದುಹೋಗಲು ಅನುವು ಮಾಡಿಕೊಡುವುದು.

(Vol. 13, p. 118)

**ನವ್ವೆಂಬರ 8, 1972**

ಒಂದು ಕ್ಷಣ – ಕೇವಲ ಕೆಲವೇ ಸೆಕೆಂಡುಗಳ ಕಾಲ – ನನ್ನಲ್ಲಿ ಅತಿಮಾನಸ



ಪ್ರಜ್ಞೆಯಿತ್ತು. ನನ್ನ ಮಗು, ಅದು ಅದ್ಭುತವಾಗಿತ್ತು. ಅದರ ಸ್ವಾದವನ್ನು ನಾವು ಈಗ ದೊರಕಿಸಬಲ್ಲೆವಾದರೆ, ಬೇರೆ ರೀತಿಯಿಂದ ಅಸ್ತಿತ್ವದಲ್ಲಿರಬೇಕೆಂದು ಬಯಸುವುದಿಲ್ಲ ಎಂಬುದನ್ನು ಅರಿತುಕೊಂಡೆ. ನಾವು ಬಹಳ ಶ್ರಮಪಟ್ಟು ಬದಲು ಮಾಡಲು ಅದರ ಕ್ರಿಯಾವಿಧಾನದಲ್ಲಿದ್ದೇವೆ. (ಹಿಟ್ಟನ್ನು ನಾದುವ ಸಂಜ್ಞೆ ಮಾಡುತ್ತಾರೆ.) ಬದಲಾವಣೆಯ ಕ್ರಿಯಾವಿಧಾನ ತೋರಿಬರುತ್ತಿದೆ. ಆದಾಗ್ಯೂ ಅದನ್ನು ಒಂದು ಬಗೆಯ ನಿರಾಸಕ್ತಿಯಿಂದ ಗ್ರಹಿಸಬಹುದು (ಅದನ್ನು ಹೇಗೆ ಅಭಿವ್ಯಕ್ತಪಡಿಸ–ಬೇಕೆಂಬುದು ನನಗೆ ತಿಳಿದಿಲ್ಲ.) ಆದರೆ ಅದು ಬಹಳ ಕಾಲ ಉಳಿದುಕೊಳ್ಳುವುದಿಲ್ಲ. ಒಂದು ನಿಯಮವೆನ್ನುವ ರೀತಿಯಲ್ಲಿ ಅದು ಬಹಳ ಶ್ರಮದಾಯಕವಾಗಿರುತ್ತದೆ. ಆದರೆ ಪ್ರಜ್ಞೆ ಬಹಳ ಅದ್ಭುತವಾಗಿರುತ್ತದೆ. ಅದು ಬಹಳ ಸ್ವಾರಸ್ಯಕರವಾಗಿರುತ್ತದೆ, ಏಕೆಂದರೆ ಅಲ್ಲಿ ಸಂಪೂರ್ಣ ಶಾಂತಿಯ ಮಧ್ಯೆ ಪರಮಾವಧಿ ಚಟುವಟಿಕೆ ಇರುತ್ತದೆ. ಆದರೆ ಅದು ಕೇವಲ ಕೆಲವು ಸೆಕೆಂಡುಗಳ ಕಾಲ ಉಳಿದುಕೊಂಡಿತ್ತು.

(ಮೌನ, ಕೈಗಳನ್ನು ಮೇಲ್ಮುಖವಾಗಿ ಇರಿಸುತ್ತಾರೆ)

ಮತ್ತು ನೀನು ?

**ಸತ್ಪ್ರೇಮ :** *ಈ ಪ್ರಜ್ಞೆ ಭೌತಿಕವಾದದ್ದೆ ?*

**ಶ್ರೀಮಾತೆ :** ಕ್ರಿಯೆ ಭೌತಿಕವಾದದ್ದು, ಆದರೆ, ಸಹಜವಾಗಿ, ಅದನ್ನು ಅದೇ ರೀತಿಯಲ್ಲಿ ಕೈಕೊಳ್ಳಲಾಗುವುದಿಲ್ಲ.

(ಮೌನ)

**ಸತ್ಪ್ರೇಮ :** *ಅದ(ತತ್)ರೊಂದಿಗೆ ಸಂಪರ್ಕ ಏರ್ಪಡಿಸಲು ಯಾವುದು ಸಹಾಯಕವಾಗುತ್ತದೆ? ಯಾವುದು ನಿಮ್ಮನ್ನು ಆಚೆಗೆ ದಾಟಿಸಿಕೊಂಡು ಹೋಗಿ ಅಲ್ಲಿರಲು ಸಹಾಯ ನೀಡುತ್ತದೆ?*

**ಶ್ರೀಮಾತೆ :** ನನಗೆ ಅದು ತಿಳಿದಿಲ್ಲ, ಏಕೆಂದರೆ ನಾನು, ನನ್ನ ಇಡೀ ಪ್ರಜ್ಞೆ, ದೇಹದ ಪ್ರಜ್ಞೆಯೂ ಕೂಡ ಯಾವಾಗಲೂ, ಯಾವುದನ್ನು ಅದು ಭಗವಂತ ಎಂದು ತಿಳಿದಿದೆಯೋ ಅವನತ್ತ ಹೊರಳಿರುತ್ತವೆ. (ಅರ್ಪಣೆ ಮಾಡುವ ಸಂಕೇತ) ಮತ್ತು ಅದನ್ನು ಪ್ರಯತ್ನ ಮಾಡದೆ ಕೈಕೊಳ್ಳಲಾಗಿರುತ್ತದೆ, ಅರ್ಥವಾಯಿತೆ?

**ಸತ್ಪ್ರೇಮ :** ಹೌದು, ಹೌದು.

(ಶ್ರೀ ಮಾತೆಯವರು ಅಂತರ್ಮುಖಿಯಾಗುತ್ತಾರೆ)

(Vol. 13, p. 321)

**ಫೆಬ್ರವರಿ 28, 1973**

**ಶ್ರೀಮಾತೆ :** ಹೇಗಿದ್ದೀಯಾ ?

**ಸತ್ಪ್ರೇಮ :** *ಅಷ್ಟೊಂದು ಸರಿಯಾಗಿಲ್ಲ.*

**ಶ್ರೀಮಾತೆ :** ಸರಿಯಾಗಿಲ್ಲವೆ ?

**ಸತ್ಪ್ರೇಮ :** *ನನಗೆ ತಿಳಿಯದು*

(ಶ್ರೀಮಾತೆ ನಗುತ್ತಾರೆ)

**ಸತ್ಪ್ರೇಮ :** *ಮನುಷ್ಯ ಯಾವ ಮಾರ್ಗದ ಮೇಲೆ ಹೆಜ್ಜೆ ಇರಿಸುತ್ತಿದ್ದಾನೆಂಬುದು ಅವನಿಗೆ ತಿಳಿದಿರುವುದಿಲ್ಲ.*

**ಶ್ರೀಮಾತೆ :** ನನಗೂ ಕೂಡ ತಿಳಿದಿಲ್ಲ!

ಆದರೆ ಅದು ಉದ್ದೇಶಪೂರ್ವಕವಾಗಿ ಹಾಗಿದೆ. ನನಗೆ ಅದರ ಬಗ್ಗೆ ಚಿಂತೆಯಿಲ್ಲ. ಏಕೆಂದರೆ ಅದು ಉದ್ದೇಶಪೂರ್ವಕವಾಗಿ ಹಾಗಿದೆ. ತಿಳಿದುಕೊಳ್ಳುವ ನಮ್ಮ ಮಾನಸಿಕ ರೀತಿಯಿದೆ. ಅದು ಯೋಗ್ಯವಲ್ಲದ್ದು, ನಿಜವಾಗಿ ಯೋಗ್ಯವಾಗಿರದೆ ಇದ್ದದ್ದು. ಅದು ಮಿಥ್ಯೆಯಿಂದ ಸತ್ಯದತ್ತ ಸಾಗುತ್ತದೆ, – ಅದು ಹಾಗಿರುವಾಗ, ಶ್ರೀ ಅರವಿಂದರು ಹೇಳಿದ ಹಾಗೆ, ಅತಿಮಾನಸವು ಸತ್ಯದಿಂದ ಸತ್ಯದತ್ತ ಸಾಗುತ್ತದೆ. ಮಾನಸಿಕವಾಗಿ ಸತ್ಯವನ್ನು ಸಮೀಪಿಸುವ ವಿಧಾನದಿಂದ ಅದಕ್ಕೆ ಯಾವ ಪ್ರಯೋಜನವೂ ಇಲ್ಲ, ಅದು ನನಗೆ ತಿಳಿದಿದೆ. ನಾನು ಸಂಪೂರ್ಣ ನಿಶ್ಚಲಳಾಗಿದ್ದಾಗ, ಇಲ್ಲಿ ನನಗೆ ತೊಂದರೆ ಉಂಟುಮಾಡುವ ಯಾರೂ ಇಲ್ಲದೆ ಇದ್ದಾಗ, (ಶ್ರೀಮಾತೆ ಕಣ್ಣು ಮುಚ್ಚಿಕೊಳ್ಳುತ್ತಾರೆ) ಒಂದು ಬಗೆಯ ಸ್ಥಿತಿ ಬರುತ್ತದೆ. ... ಮತ್ತು ಅದು ಅಭಿವೃದ್ಧಿ ಹೊಂದಿದರೆ ಎಂಬ ಭಾವನೆ ಇರುತ್ತದೆ. ... (ಶ್ರೀಮಾತೆ ಮೌನವಾಗಿ ಮುಗುಳ್ನಗುತ್ತಾರೆ), ಆಗ ನೀವು ಪ್ರಕಾಶಮಯ ಭವ್ಯತೆಯಲ್ಲಿ ಪ್ರವೇಶಿಸುತ್ತೀರಿ. ಅಲ್ಲಿ ಯಾವ ಪ್ರಶ್ನೆಯೂ ಉಳಿದಿರುವುದಿಲ್ಲ.

(ಶ್ರೀಮಾತೆ ಸತ್ಪ್ರೇಮನ ಕೈಗಳನ್ನು ಹಿಡಿದುಕೊಂಡು ಅಂತರ್ಮುಖಿಯಾಗುತ್ತಾರೆ.)

(Vol. 13, p. 369)

**ಮಾರ್ಚ 31, 1973**

**ಸತ್ಪ್ರೇಮ :** *ಆ ಹೊಸ ಪ್ರಜ್ಞೆಯನ್ನು ಕುರಿತು ನನ್ನ ಪ್ರಶ್ನೆ ಇದೆ. ನಾನು ಅದರ ಧ್ಯಾನಾಸಕ್ತ ಇಲ್ಲವೆ ನಿಷ್ಕ್ರಿಯ ಭಾಗವನ್ನು ಗ್ರಹಿಸುತ್ತೇನೆ ಇಲ್ಲವೆ ಊಹೆ ಮಾಡುತ್ತೇನೆ,*



*ಆದರೆ ಅಷ್ಟು ಒಳ್ಳೆಯ ರೀತಿಯಲ್ಲಿ ಕ್ರಿಯಾಶೀಲ ಇಲ್ಲವೆ ಕ್ರಿಯಾಸಕ್ತ ಭಾಗವನ್ನು ಗ್ರಹಿಸಲಾಗುವುದಿಲ್ಲ. ಅದು ಹೇಗೆ ಕಾರ್ಯ ಮಾಡುತ್ತದೆಂಬುದು ನನಗೆ ಸರಿಯಾಗಿ ತಿಳಿದಿಲ್ಲ. – ಧ್ಯಾನಾಸಕ್ತ ಭಾಗವನ್ನು ಅರ್ಥಮಾಡಿಕೊಳ್ಳುತ್ತೇನೆ, ಆದರೆ ಹೇಗೆ ಕ್ರಿಯೆ ಕೈಕೊಳ್ಳುತ್ತದೆ?*

**ಶ್ರೀಮಾತೆ :** ಅದು ನನಗೆ ಗೊತ್ತಿಲ್ಲ, ಅದರ ವಿಚಾರ ನನಗೆ ತಿಳಿದಿಲ್ಲ.

**ಸತ್ಪ್ರೇಮ :** *ಆದರೆ ನೀವು ಕ್ರಿಯೆ ಕೈಕೊಳ್ಳುತ್ತೀರೋ, ಅಥವಾ ಅಂತರಂಗದಲ್ಲಿ ಮಗ್ನರಾಗಿರುತ್ತೀರೋ?*

**ಶ್ರೀಮಾತೆ :** ಹೌದು, ನಾನು ಕಾರ್ಯ ಮಾಡುತ್ತೇನೆ, ಆದರೆ, ನಿಖರವಾಗಿ, ನೀನು ಹೇಳುತ್ತಿರುವುದೇನು?

**ಸತ್ಪ್ರೇಮ :** *ಉದಾಹರಣೆಗೆ ನೀವು ಅಂತರಂಗದಲ್ಲಿ ಮಗ್ನರಾಗಿದ್ದಾಗ, ಆಂತರಿಕ ಸ್ಥಿತಿಯಲ್ಲಿದ್ದಾಗ ...*

**ಶ್ರೀಮಾತೆ :** ನಾನು ಅಂತರಂಗದಲ್ಲಿರುವಾಗಿನದಕ್ಕಿಂತ ಬಾಹ್ಯದಲ್ಲಿದ್ದಾಗ ಹೆಚ್ಚು ಒಳ್ಳೆಯ ರೀತಿಯಲ್ಲಿ ಕಾರ್ಯಮಾಡುತ್ತೇನೆ ಎಂದು ತಿಳಿದುಕೊಳ್ಳುವುದು ಸರಿಯಲ್ಲ. ಹಾಗೆ ತಿಳಿದುಕೊಳ್ಳುವ ತಪ್ಪನ್ನು ಪ್ರತಿಯೊಬ್ಬನೂ ಮಾಡುತ್ತಾನೆ.

**ಸತ್ಪ್ರೇಮ :** *ಹೌದು, ನನಗೆ ಸಂಪೂರ್ಣವಾಗಿ ಅರ್ಥವಾಗುತ್ತದೆ.*

**ಶ್ರೀಮಾತೆ :** ನಾನು ಆ ರೀತಿ ಏಕಾಗ್ರತೆಯಲ್ಲಿದ್ದಾಗ, ಅಂತರಂಗದಲ್ಲಿರುವುದಿಲ್ಲ, ಇನ್ನೊಂದು ಬಗೆಯ ಪ್ರಜ್ಞೆಯಲ್ಲಿರುತ್ತೇನೆ.

ಮತ್ತು ಅದು ಅತ್ಯಂತ ವಿಶಾಲವಾಗಿದೆ.

**ಸತ್ಪ್ರೇಮ :** *ಆದರೆ ಅದು ಕ್ರಿಯಾಶೀಲ ಬದಿ, ಅದು ನನಗೆ ಅರ್ಥವಾಗುತ್ತಿಲ್ಲ.*

**ಶ್ರೀಮಾತೆ :** ಆದರೆ ಅದಕ್ಕೆ ಯಾವ ಬದಿಗಳೂ ಇಲ್ಲ: ಅದು ಪ್ರಜ್ಞೆ (ಮೇಲಿನಿಂದ ಒತ್ತಡವಿರುವ ಸಂಜ್ಞೆ) ಅದಕ್ಕೆ ಬದಿಗಳಿಲ್ಲ, ಅದು ನಿಷ್ಕ್ರಿಯ ಇಲ್ಲವೆ ಕ್ರಿಯಾಶೀಲವಾದುದಲ್ಲ – ಅದು ಪ್ರಜ್ಞೆ (ಮೇಲಿನಿಂದ ಒತ್ತಡವಿರುವ ಸಂಜ್ಞೆ) ಜಗತ್ತಿನ ಮೇಲೆ ಒತ್ತಡ ತರುತ್ತಿರುವ ಪ್ರಜ್ಞೆ,

(ಮೌನ)

ನೀನು ಅದನ್ನು ಮಾನಸಿಕ ರೂಪದಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುವಿ.

ಅದು ಅಸಾಧ್ಯ, ನೀನು ಆ ಪ್ರಜ್ಞೆಯಲ್ಲಿ ಪ್ರವೇಶಿಸಬೇಕು, ಆಗ ಮಾತ್ರ ಅದೇನಿರುವುದೆಂಬುದನ್ನು ತಿಳಿದುಕೊಳ್ಳುವಿ. ಕ್ರಿಯಾಶೀಲ ಇಲ್ಲವೆ ನಿಷ್ಕ್ರಿಯ ಪ್ರಜ್ಞೆ, ಆಂತರಿಕ ಇಲ್ಲವೆ ಬಾಹ್ಯ ಪ್ರಜ್ಞೆ ಎಂಬುದಿಲ್ಲ, ಅದೆಲ್ಲದರ ಸ್ಥಾನದಲ್ಲಿ ಬೇರೆ ಏನೋ ಒಂದು ಬರುತ್ತದೆ. ಅದನ್ನು ವರ್ಣಿಸಿ ಹೇಳಲಾಗುವುದಿಲ್ಲ, ಅದನ್ನು ಕುರಿತು ಹೇಳಲು ಶಬ್ದಗಳಿಲ್ಲ.

**ಸತ್ಪ್ರೇಮ :** *ಆದರೆ, ಉದಾಹರಣೆಗೆ, ವೈಯಕ್ತಿಕವಾಗಿ ನಾನು ಅಲ್ಲಿಗೆ ಎಂದರೆ ಆ ಪ್ರಜ್ಞೆಯಲ್ಲಿ ಹೋಗಲು ಪ್ರಯತ್ನಿಸಿದಾಗ ನಾನು ಅಸ್ತಿತ್ವದಲ್ಲಿ ಉಳಿದುಕೊಂಡಿಲ್ಲ ಎಂಬ ಭಾವನೆ ಬರುತ್ತದೆ.*

**ಶ್ರೀಮಾತೆ :** ಅಹಾ, ಅದಲ್ಲ!

**ಸತ್ಪ್ರೇಮ :** *ನನ್ನ ವೈಯುಕ್ತಿಕ ಅಸ್ತಿತ್ವವನ್ನು ಕುರಿತು ಹೇಳುತ್ತಿದ್ದೇನೆ.*

**ಶ್ರೀಮಾತೆ :** ಅದಲ್ಲ.

**ಸತ್ಪ್ರೇಮ :** *ಅದು ಬಹಳ ವಿಶಾಲವಾಗಿದೆ, ಆದರೆ ಅಲ್ಲಿ ವ್ಯಕ್ತಿವಿಶಿಷ್ಟತೆ ಇಲ್ಲ.*

**ಶ್ರೀಮಾತೆ :** ಅದಲ್ಲ. ಅದು ಅದಲ್ಲ. ... ನನಗೆ ಅದೆಲ್ಲ ಭೂತಕಾಲಕ್ಕೆ ಸೇರಿದ್ದು.

(ಮೌನ)

ಹೌದು, ನೀನು ಅರ್ಥಮಾಡಿಕೊಂಡಿದ್ದನ್ನು ನಾನು ಸರಿಯಾಗಿ ತಿಳಿದುಕೊಂಡಿದ್ದೇನೆ.

(Vol. 13, p. 386)

**ಏಪ್ರಿಲ್ 11, 1973**

*ಶ್ರೀ ಮಾತೆಯವರೆ, ಎಪ್ರಿಲ್ 24ರ ದರ್ಶನ ದಿನಕ್ಕಾಗಿ ನೀವು ಒಂದು ಸಂದೇಶ ಕೊಡಬೇಕಾಗಿದೆ.*

(ಸ್ವಲ್ಪ ಕಾಲದ ಮೌನದ ನಂತರ)

ನನಗೆ ಹೊಳೆಯುತ್ತಿರುವುದು ಹೀಗಿದೆ:

ಮಾನವನ ಪ್ರಜ್ಞೆಯಾಚೆ
ಮನಸ್ಸಿನಾಚೆ ಇರುವ
ಓ, ನೀನು ಪರಮೋಚ್ಚ ದೈವೀ ಪ್ರಜ್ಞೆ
ಅನನ್ಯ ದೈವೀ ನೈಜತೆ



ಬದಲಾಗದ ಸತ್ಯ (ಶ್ರೀ ಮಾತೆಯವರು ಹಿಂದು ಮುಂದು
ನೋಡಿ ತಮ್ಮನ್ನು ತಿದ್ದಿಕೊಳ್ಳುತ್ತಾರೆ)
ದೈವೀ ಸತ್ಯ.

(Vol. 13, p. 398)

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 2ನೇ ಮಾರ್ಚ್ 2014 ರ ಭಾನುವಾರದಂದು ಬೆಳಿಗ್ಗೆ 10.30 ರಿಂದ 12.30 ರವರೆಗೆ "Purpose of Life and Sanatana Dharma" ಎಂಬ ವಿಷಯದ ಬಗ್ಗೆ ಶ್ರೀಯುತ ಕೈಪಾ ಎಸ್. ಶೇಷಾದ್ರಿ, ಧರ್ಮಾಧಿಕಾರಿ, ಧರ್ಮ ಪ್ರತಿಷ್ಠಾನ, ಬಸವನಗುಡಿ, ಬೆಂಗಳೂರು ಇವರಿಂದ ಉಪನ್ಯಾಸ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಗುರುಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 15ನೇ ಮಾರ್ಚ್ 2014 ರ ಶನಿವಾರ ಸಾಯಂಕಾಲ 4.00 ಗಂಟೆಯಿಂದ 5.00 ಗಂಟೆಯವರೆಗೆ "The Yoga of Divine Love" ಎಂಬ ವಿಷಯದ ಬಗ್ಗೆ ಡಾ॥ ಅಲೋಕ ಪಾಂಡೆ, ಶ್ರೀ ಅರವಿಂದೋ ಆಶ್ರಮ, ಪುದುಚೇರಿ ಇವರಿಂದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಶ್ರೀ ಅರವಿಂದರ ಭಕ್ತ ವೃಂದದವರು ಮತ್ತು ಇತರರು ಹಾಜರಿದ್ದರು.

ದಿನಾಂಕ 29ನೇ ಮಾರ್ಚ್ 2014 ರ ಶನಿವಾರ ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ಶತಮಾನೋತ್ಸವ ದಿನಾಚರಣೆ ಆಚರಿಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.30 ಗಂಟೆಯರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ 10.40 ರಿಂದ 11.40 ರವರೆಗೆ "... Then, thoughtful, went to her immortal work ... - Savitri ಎಂಬ ವಿಷಯದ ಬಗ್ಗೆ ಶ್ರೀಯುತ ಭಾಸ್ಕರ ರೆಡ್ಡಿಯವರಿಂದ ಉಪನ್ಯಾಸವನ್ನು ಏರ್ಪಡಿಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು, ಇತರರು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು. ಅದೇ ದಿನದಿಂದ 20ನೇ ಏಪ್ರಿಲ್ 2014 ರವರೆಗೂ "Maa - The Supreme Shakti" ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಏರ್ಪಡಿಲಾಗಿದೆ.



*..the divine and universal Mother*
*has turned her gaze upon the earth*
*and she has blessed it.*

- The Mother

**RNI No. 22511/1971**
No. of Pages **48 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.